ದಶಮಾನ ಕಂಡ ಜಿಲ್ಲೆಯ ಮೊದಲ ಪ್ರಾದೇಶಿಕ ದಿನ ಪತ್ರಿಕೆ

ದಾವಣಗೆರೆ, ಉಡುಪಿ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ಗದಗ, ಬೆಂಗಳೂರು ಗ್ರಾಮಾಂತರ

KB 12 YEARS 2013

# ಕನ್ನಡ ಭಾರತಿ

ನೊಂದವರ ನೈಜ ಕನ್ನಡಿ

ಸಂಪಾದಕರು : ಮಲ್ಲಿಕಾರ್ಜುನ್ ಕಬ್ಬೂರು

ಸಂಪುಟ : 13 ಸಂಚಿಕೆ : 88

20-9-2025 ಶನಿವಾರ

₹1 KA/SK/DVG-006/2023-2025 KARKAN/2013/50807 KANNADA BHARATHI REGIONAL DALIY DAVANAGERE dvgkanndabharathi@gmail.com Page : 6 VOLUME : 13 ISSUE : 88

## ಉದ್ಘಾಟನೆಗೆ ಬಾನು ಮುಷ್ತಾಕ್‌ಗೆ ಆಹ್ವಾನ ವಿರೋಧಿಸಿದ್ದ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ವಜಾ

**ಬೆಂಗಳೂರು :** ಮಹತ್ವದ ಬೆಳವಣಿಗೆಯೊಂದರಲ್ಲಿ, ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಮೈಸೂರು ದಸರಾ ಉದ್ಘಾಟಿಸುವುದನ್ನು ವಿರೋಧಿಸಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಸುಪ್ರೀಂಕೋರ್ಟ್ ಇಂದು ವಜಾಗೊಳಿಸಿದೆ. ಬಾನು ಮುಷ್ತಾಕ್ ಅವರು ಈ ಹಿಂದೆ ಹಿಂದೂ ವಿರೋಧಿ ಹೇಳಿಕೆಗಳನ್ನು ನೀಡಿದ್ದು, ಅವರಿಂದ ದಸರಾ ಉದ್ಘಾಟನೆ ಮಾಡಿಸಬಾರದು ಎಂದು ಆಗ್ರಹಿಸಿ ಸುಪ್ರೀಂ ಕೋರ್ಟ್‌ಗೆ ಸರ್ಜಿ ಸಲ್ಲಿಸಲಾಗಿತ್ತು. ಈ ವಿಚಾರದಲ್ಲಿ ಕರ್ನಾಟಕ ಹೈಕೋರ್ಟ್ ಆದೇಶವನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ, ಅರ್ಜಿಯನ್ನು ವಜಾಗೊಳಿಸಿದೆ. ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಬಿಪಿ ಸುರೇಶ್, "ಹಿಂದೂಯೇತರ ವ್ಯಕ್ತಿಗಳಿಂದ ನಾಡದೇವತೆಗೆ ಪೂಜೆ ಮಾಡಿಸುವುದು ಸರಿಯಲ್ಲ" ಎಂದು ಪ್ರತಿಪಾದಿಸಿದರು. ಆದರೆ ಪೀಠವು ಈ ವಾದವನ್ನು ಕೋರ್ಟ್ ಒಪ್ಪಿಲ್ಲ ಇದಕ್ಕೂ ಮೊದಲು ಬಾನು ಮುಷ್ತಾಕ್ ದಸರಾ ಉದ್ಘಾಟನೆ ವಿರೋಧಿಸಿ, ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ ಪ್ರತಾಪ್ ಸಿಂಹ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು.



## ಉಪಲೋಕಾಯುಕ್ತರಿಂದ ಬಾಕಿ ಪ್ರಕರಣಗಳ ವಿಚಾರಣೆ

**ಚಿಕ್ಕಮಗಳೂರು, ಸೆ.19:** ಜಿಲ್ಲೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ (ಉಪ ಲೋಕಾಯುಕ್ತರ ಕಾರ್ಯ ವ್ಯಾಪ್ತಿಗೆ ಒಳಪಡುವಂತಹವು) ಪ್ರಕರಣಗಳಲ್ಲಿ ತನಿಖೆ, ವಿಚಾರಣೆಗೆ ಬಾಕಿ ಇರುವವುಗಳನ್ನು ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಜಿ.ಪಂ.ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಸೆಪ್ಟಂಬರ್ 25 ರಂದು ಗೌರವಾನ್ವಿತ ನ್ಯಾಯಮೂರ್ತಿ ಉಪಲೋಕಾಯುಕ್ತರಾದ ಶ್ರೀ ಕೆ.ಎನ್.ಫಣೀಂದ್ರ ಅವರು ಕಾನೂನು ರೀತಿಯಲ್ಲಿ ವಿಚಾರಣೆ ನಡೆಸಲಿದ್ದಾರೆ ಎಂದು ಚಿಕ್ಕಮಗಳೂರು ಹಾಗೂ ಮೂಡಿಗೆರೆ ತಾಲ್ಲೂಕು ತಹಸೀಲ್ದಾರರುಗಳು ತಿಳಿಸಿದ್ದಾರೆ. ಸೆಪ್ಟಂಬರ್ 24 ರಿಂದ 26ರವರೆಗೆ ಜಿಲ್ಲೆಯಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಪ್ರವಾಸ ಕೈಗೊಂಡಿರುವ ಸಂದರ್ಭ 24 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ರವರೆಗೆ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 5 ಗಂಟೆಯವರೆಗೆ ಕುವೆಂಪು ಕಲಾಮಂದಿರದಲ್ಲಿ ಸಾರ್ವಜನಿಕ ಕುಂದುಕೊರತೆಗಳ ಅಹವಾಲು ಸ್ವೀಕಾರ ಹಾಗೂ ವಿಚಾರಣೆಯನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಯಾವುದೇ ಸಾರ್ವಜನಿಕರಿಗೆ ಸರ್ಕಾರಿ ಅಧಿಕಾರಿಗಳು, ನೌಕರರು ನ್ಯಾಯಯುತವಾಗಿ ನಡೆಸಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುವುದು ಅಥವಾ ಇನ್ಯಾವುದೇ ರೀತಿಯ ದುರಾಡಳಿತದಲ್ಲಿ ತೊಡಗಿದ್ದರೆ, ಅಂಥ ಪ್ರಕರಣಗಳಲ್ಲಿ ಸಾರ್ವಜನಿಕರು ಉಪಲೋಕಾಯುಕ್ತರ ಮುಂದೆ ತಮ್ಮ ಅಹವಾಲುಗಳನ್ನು ಅರ್ಜಿ ನಮೂನೆ 1 ಮತ್ತು 2 ರಲ್ಲಿ ಲಿಖಿತ ರೂಪದಲ್ಲಿ ದಾಖಲೆ, ಸಾಕ್ಷ್ಯಾಧಾರಗಳೊಂದಿಗೆ ಸಲ್ಲಿಸಬಹುದು. ಸಾರ್ವಜನಿಕರು ಈ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳುವಂತೆ ಅವರು ಕೋರಿದ್ದಾರೆ.

## ಸೆ.22ರಿಂದತ್ರಿಕೂಟಚಲಾದಲ್ಲಿ ನವರಾತ್ರಿ ಉತ್ಸವ

**ದಾವಣಗೆರೆ:** ತಾಲ್ಲೂಕಿನ ಲೋಕಿಕೆರೆಯ ಕೋಡಿಹಳ್ಳಿ ರಸ್ತೆಯಲ್ಲಿರುವ ಶ್ರೀ ತ್ರಿಕೂಟಾಚಲ ದೇವಸ್ಥಾನದ ಶ್ರೀ ಉಮಾಮಹೇಶ್ವರ ಸ್ವಾಮಿ, ಶ್ರೀ ಲಕ್ಷ್ಮೀವೆಂಕಟೇಶ್ವರಸ್ವಾಮಿ ಹಾಗೂ ಶ್ರೀ ಚಂಡಿಕಾ ದುರ್ಗಾ-ಪರಮೇಶ್ವರಿ ಅಮ್ಮನವರ 2ನೇ ವರ್ಷದ ದಸರಾ ಮಹೋತ್ಸವವನ್ನು ಸೆ.22ರಿಂದ ಅ.2ರವರೆಗೆ ಜರುಗಲಿದೆ.

ಶ್ರೀ ಚಂಡಿಕಾ ದುರ್ಗಾಪರಮೇಶ್ವರಿ ದೇವಿಗೆ ಪೂಜೆ, ಹೂವಿನ ಅಲಂಕಾರ, ತರಕಾರಿ ಅಲಂಕಾರ, ಹಣ್ಣಿನ ಅಲಂಕಾರ, ಕುಂಕುಮದ ಅಲಂಕಾರ ಹಾಗೂ ಗಂಧದ ಅಲಂಕಾರಗಳೊಂದಿಗೆ ಪ್ರತಿ ದಿವಸ ಸಂಜೆ 5ರಿಂದ ರಾತ್ರಿ 7-30ರವರೆಗೆ ವಿವಿಧ ರಸಮಂಜರಿ ಕಾರ್ಯಕ್ರಮ, ಕೋಲಾಟ, ಸಂಗೀತ ಕಾರ್ಯಕ್ರಮ, ಕೊಳಲು ವಾದನ, ವೀಣಾವಾದನ, ಭರತನಾಟ್ಯ, ಮಕ್ಕಳಿಂದ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ ಎಂದು ತ್ರಿಕೂಟಾಚಲ ಸೇವಾ ಟ್ರಸ್ಟ್‌ನ ಧರ್ಮದರ್ಶಿ ಹೆಚ್. ತಿಪ್ಪಣ್ಣ ತಿಳಿಸಿದ್ದಾರೆ.

## ಇಂದು ಶ್ರೀ ಕುಕ್ಕವಾಡೇಶ್ವರಿ ದೇವಸ್ಥಾನದಲ್ಲಿ ಹೋಮ, ಪಲ್ಲಕ್ಕಿ ಉತ್ಸವ

**ದಾವಣಗೆರೆ:** ಚನ್ನಗಿರಿ ತಾಲ್ಲೂಕಿನ ಜೋಳದಾಳು ಬಳಿಯಿರುವ ಅಮ್ಮನಗುಡ್ಡದ ಶ್ರೀ ಕುಕ್ಕವಾಡೇಶ್ವರಿ ದೇವಸ್ಥಾನದಲ್ಲಿ ಸೆ. 20ರ ಇಂದು ಬೆಳಿಗ್ಗೆ 10 ಗಂಟೆಗೆ ಬಾಳೆಕಲ್ಲು ಮಠದ ಶ್ರೀ ಸಿದ್ದೇಶ್ವರ ಸ್ವಾಮಿಯ 19 ನೇ ವರ್ಷದ ಅಭಿಷೇಕ ಮತ್ತು ಹೋಮ ಆಯೋಜನೆಗೊಂಡಿದೆ.

ಅಣಬೇರು ಗ್ರಾಮದ ವಾಸಿ ಗಿರಿತಿಮ್ಮಸ್ಥರ ದಿ. ಕೆಂಚಮ್ಮ ದಿ. ಗಿರಿತಿಮ್ಮಪ್ಪ ಇವರ ಸ್ಮರಣಾರ್ಥವಾಗಿ ಸಂಜೆ 6 ಗಂಟೆಗೆ 12 ನೇ ವರ್ಷದ ಅಡ್ಡಪಲ್ಲಕ್ಕಿ ಮತ್ತು ಹೂವಿನ ಪಲ್ಲಕ್ಕಿ ಉತ್ಸವ ಜರುಗಲಿದೆ. ಸೆ.21 ರಂದು ಬೆಳಿಗ್ಗೆ 8 ಗಂಟೆಗೆ ದೇವಸ್ಥಾನದಲ್ಲಿ ಆವರಣದಲ್ಲಿ 19 ನೇ ವರ್ಷದ ಅನ್ನದಾಸೋಹ ಕಾರ್ಯಕ್ರಮ ಜರುಗಲಿದೆ.

## ಇಂದು ಶಿಕ್ಷಕರ ದಿನಾಚರಣೆ, ನಿವೃತ್ತ ಶಿಕ್ಷಕರ ಸನ್ಮಾನ

ದಾವಣಗೆರೆ: ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು ಉತ್ತರ ವಲಯ ಮತ್ತು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಸೆ.20ರ ಇಂದು ಬೆಳಿಗ್ಗೆ 10:45ಕ್ಕೆ ಶಿಕ್ಷಕರ ದಿನಾಚರಣೆ, ನಿವೃತ್ತ ಶಿಕ್ಷಕರ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ನಗರದ ದೇವರಾಜ ಅರಸ ಬಡಾವಣೆಯಲ್ಲಿರುವ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಂಘದ ಗೌರವಾಧ್ಯಕ್ಷ ಕೆ.ಜಿ. ಷಡಕಪ್ಪ ಅಧ್ಯಕ್ಷತೆಯಲ್ಲಿ ಜರುಗುವ ಕಾರ್ಯಕ್ರಮದ ಉದ್ಘಾಟನೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ಜಿ. ಕೊಟ್ರೇಶ್ ಉದ್ಘಾಟಿಸಲಿದ್ದಾರೆ. ಡಯಟ್ ಕಾಲೇಜಿನ ಹಿರಿಯ ಉಪನ್ಯಾಸಕ ಬಿ.ಎಂ. ದಾರುಕೇಶ್ ಮತ್ತು ರಾಜಯೋಗಿನಿ ಬಿ.ಕೆ. ಸವಿತಾ ಉಪನ್ಯಾಸ ನೀಡಲಿದ್ದಾರೆ. ಉತ್ತರ ವಲಯದ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಆರ್. ಶೇರ್ ಅಲಿ ಅವರಿಗೆ ಗೌರವ ಸಮರ್ಪಣೆ ಮಾಡಲಾಗುತ್ತದೆ. ಮುಖ್ಯಅತಿಥಿಗಳಾಗಿ ಉತ್ತರ ಬಿಇಓ ಹೆಚ್.ಆರ್. ವಿಶಾಲಾಕ್ಷಿ, ಬ್ರಹ್ಮಕುಮಾರಿಯ ರಾಜಯೋಗಿನಿ ಲೀಲಾಜಿ ಪಾಲ್ಗೊಳ್ಳಲಿದ್ದಾರೆ.

# ಶ್ರೀ ವಾಲ್ಮೀಕಿ ಜಯಂತಿ ಅದ್ದೂರಿ, ಅರ್ಥಪೂರ್ಣ ಆಚರಣೆಗೆ ನಿರ್ಧಾರ



**ದಾವಣಗೆರೆ:** ಸೆ.19: ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣ ಮತ್ತು ಅದ್ದೂ-ರಿಯಾಗಿ ಆಚರಿಸಲಾಗುತ್ತಿದ್ದು, ಅಧಿಕಾರಿಗಳು ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್ ತಿಳಿಸಿದರು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಕ್ಟೋಬರ್ 7 ರಂದು ನಡೆಯುವ ವಾಲ್ಮೀಕಿ ಜಯಂತಿ ಅಂಗವಾಗಿ ನಗರದ ಹೊಂಡದ ಸರ್ಕಲ್‌ನಲ್ಲಿನ ರಾಜವೀರ ಮದಕರಿ ನಾಯಕ ಪುತ್ಥಳಿಗೆ ಪುಷ್ಪಾರ್ಚನೆ ಸಲ್ಲಿಸಿ, ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರದೊಂದಿಗೆ ಮೆರವಣಿಗೆ ಪ್ರಾರಂಭವಾಗಿ ವಿವಿಧ ಕಲಾತಂಡಗಳೊಂದಿಗೆ ನಗರದ ಎಂ.ಸಿ.ಸಿ.ಬಿ ಬ್ಲಾಕ್‌ನಲ್ಲಿರುವ ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪ ತಲುಪಲಿದ್ದು, ತದನಂತರ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಸರ್ಕಾರದ ಶಿಷ್ಟಾಚಾರದಂತೆ ಜನಪ್ರತಿನಿಧಿಗಳು ಮತ್ತು ಎಲ್ಲಾ ಗಣ್ಯವ್ಯಕ್ತಿಗಳನ್ನು ಆಹ್ವಾನಿಸಬೇಕು. ನುರಿತ ಉಪನ್ಯಾಸಕರಿಂದ ಮಹರ್ಷಿ ವಾಲ್ಮೀಕಿ ಕುರಿತು ಉಪನ್ಯಾಸ ಕಾರ್ಯಕ್ರಮಆಯೋಜಿಸಲಾಗುವುದು ಎಂದರು.

ಕಲ್ಯಾಣ ಮಂಟಪದ ಮುಂಭಾಗದಲ್ಲಿ ಸ್ವಾಗತ ಫಲಕ, ಕುರ್ಚಿಗಳ ವ್ಯವಸ್ಥೆ, ಧ್ವನಿ ವರ್ಧಕ, ಬ್ಯಾಕ್ ಡ್ರಾಪ್, ಹೂವಿನ ಅಲಂಕಾರ, ಉಪನ್ಯಾಸ, ಕುಡಿಯುವ ನೀರಿನ ವ್ಯವಸ್ಥೆ, ಲಘು ಉಪಹಾರದ ವ್ಯವಸ್ಥೆ ಕಲ್ಪಿಸಲಾಗುವುದು. ಕಾರ್ಯಕ್ರಮ ಯಶಸ್ವಿಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶಿಸಿದರು.

ಕಾರ್ಯಕ್ರಮಕ್ಕೆ ಹೆಚ್ಚು ಪ್ರಚಾರ ನೀಡಲು ನಗರದ ಎಲ್ಲಾ ಪ್ರಮುಖ ವೃತ್ತಗಳಲ್ಲಿ ಬ್ಯಾನರ್‌ಗಳನ್ನು ಅಳವಡಿಸಬೇಕು ಮತ್ತು ಕಾರ್ಯಕ್ರಮಕ್ಕೂ ಮುನ್ನ ಮದಕರಿ ಸರ್ಕಲ್ ನಿಂದ ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದವರೆಗೆ ವಿವಿಧ ಕಲಾತಂಡಗಳೊಂದಿಗೆ ವಿಜೃಂಭಣೆ ಮೆರವಣಿಗೆಯನ್ನು ಏರ್ಪಡಿಸಬೇಕು ಎಂದು ಸಮಾಜದ ಮುಖಂಡೊಬ್ಬರು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಪರ ಜಿಲ್ಲಾಧಿಕಾರಿ ಸಕಾರಾತ್ಮಕವಾಗಿ ಸ್ಪಂದಿಸಿದರು.

## ಜಾತಿ ಸಮೀಕ್ಷೆ ಮುಂದೂಡಿಕೆ ಇಲ್ಲ: ಸಿಎಂ ಸಿದ್ದರಾಮಯ್ಯ

**ಬೆಂಗಳೂರು:** ಜಾತಿ ಸಮೀಕ್ಷೆಯನ್ನು ಮುಂದೂಡುವುದಿಲ್ಲ, ಬಿಜೆಪಿಯವರು ರಾಜಕೀಯವಾಗಿ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಹಿಂದೂಗಳ ವಿರುದ್ಧವಾಗಿದೆ ಎಂದು ಬಿಜೆಪಿಯವರ ಆರೋಪ ಸುಳ್ಳು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಬೆಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಜಾತಿಗಣತಿ ಸಂಬಂಧ ಸಚಿವರ ಒತ್ತಡಗಳಿಗೆ ಮಣಿಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಮುಂದೂಡುವ ಪ್ರಶ್ನೆಯೇ ಇಲ್ಲ ಎಂದಿದ್ದಾರೆ. ಸೆ. 22ರಿಂದ ಕೆಲ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಸಮೀಕ್ಷೆ ಮುಂದುವರಿಸಲು ಸೂಚನೆ ನೀಡಿದ್ದೇನೆ ಎಂದಿದ್ದಾರೆ.



ಗೊಂದಲದ ಅಂಶಗಳಿಗೆ ಬ್ರೇಕ್ ಹಾಕಿ ಸಮೀಕ್ಷೆ ಮುಂದುವರಿಸುವಂತೆ ಸೂಚಿಸಿದ್ದೇನೆ ಎಂದಿದ್ದಾರೆ. ಈ ನಡುವೆ ಸಿಎಂ ಸಿದ್ದರಾಮಯ್ಯ ಅವರ ಸರ್ಕಾರಿ ನಿವಾಸದಲ್ಲಿ ಈ ನಿಟ್ಟಿನಲ್ಲಿ ಚರ್ಚೆ ನಡೆಸಲು ಹೈವೋಲ್ಟೇಜ್ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಹಿರಿಯ ಸಚಿವರು ಭಾಗವಹಿಸಿದ್ದರು.

## ಧರ್ಮ ಮತ್ತು ಜಾತಿಯ ಕಾಲಂನಲ್ಲಿ ರಡ್ಡಿ ಲಿಂಗಾಯತ ಎಂದೇ ಬರೆಸಿ: ಹೇಮರೆಡ್ಡಿ ಮಲ್ಲಮ್ಮ ಸಮಾಜದ ಮನವಿ

**ದಾವಣಗೆರೆ.ಸೆ.19:** ಲಿಂಗಪೂಜೆ/ ಇಷ್ಟಲಿಂಗ ಪೂಜೆ ಮಾಡುವ ವೀರಶೈವ ಲಿಂಗಾಯತ ರಡ್ಡಿ/ಲಿಂಗಾಯತ ರಡ್ಡಿ ಸಮಾಜದವರು ಸೆ.22 ರಿಂದ ಪ್ರಾರಂಭವಾಗುವ ಜಾತಿಗಣತಿ ಸಮೀಕ್ಷೆಯಲ್ಲಿ ಧರ್ಮ ಮತ್ತು ಜಾತಿಯ ಕಾಲಂನಲ್ಲಿ ರಡ್ಡಿ ಲಿಂಗಾಯತ ಎಂದೇ ಬರೆಸಬೇಕೆಂದು ಹೇಮರೆಡ್ಡಿ ಮಲ್ಲಮ್ಮ ಸಮಾಜದ ಜಿಲ್ಲಾಧ್ಯಕ್ಷ ಡಾ॥ಕೊಟ್ರೇಶ್ ಬಿದರಿ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗಾಯತ ಎನ್ನುವುದು ಸ್ವತಂತ್ರ ಧರ್ಮ. ನಾವುಗಳು ಹಿಂದೂಗಳಲ್ಲ. ಆದರೆ ನಮ್ಮಗಳ ಕೆಲ ದಾಖಲೆಗಳಲ್ಲಿ ಹಿಂದೂ ಎಂದು ನಮೂದಿಸಲಾಗಿದೆ. ನಾವುಗಳು ಲಿಂಗಪೂಜೆ ಮಾಡುತ್ತೇವೆ ಹೊರತು, ಹೋಮ ಹವನ ಮಾಡುವುದಿಲ್ಲ ಎಂದು ಹೇಳಿದರು.

ಆದರೆ, ಸೆ.22 ರಿಂದ ಹಿಂದೂಳಿದ ಆಯೋಗವು ಜಾತಿಗಣತಿ ಸಮೀಕ್ಷೆಗೆ ಮನೆ ಮನೆಗೆ ಬಂದಾಗ ಏನೆಂದು ಬರೆಸಬೇಕೆಂಬ ಗೊಂದಲ ಉಂಟಾಗಿತ್ತು. ಈ ಬಗ್ಗೆ ಸೆ.9 ರಂದು ಹುಬ್ಬಳ್ಳಿಯಲ್ಲಿ ಸಮಾಜದ ರಾಜ್ಯ ಮಟ್ಟದ ಸಭೆಯಲ್ಲಿ ಧರ್ಮ ಹಾಗೂ ಜಾತಿ ಕಾಲಂನಲ್ಲಿ ರಡ್ಡಿ ಲಿಂಗಾಯತ ಎಂದೇ ಬರೆಸಬೇಕೆಂದು ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ. ಆದ್ದರಿಂದ ನಮ್ಮ ಸಮಾಜ ಬಾಂಧವರು ರಡ್ಡಿ ಲಿಂಗಾಯತ ಎಂದೇ ಬರೆಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಹೇಮರೆಡ್ಡಿ ಮಲ್ಲಮ್ಮ ಸಮಾಜದ ಜಿ.ಬಿ.ಲೋಕೇಶ್, ಸತೀಶ್ ಗೌಡ, ಶ್ರೀಧರ್ ಪಾಟೀಲ್, ಕುಸುಮ ಲೋಕೇಶ್, ಜಿ.ಮನೋಹರ, ರವಿಚಂದ್ರ ರೆಡ್ಡಿ ಇದ್ದರು.

## ರಾಹುಲ್ ಗಾಂಧಿ ಜನ್ಮದಿನವನ್ನು ರಾಷ್ಟ್ರೀಯ ಮೂರ್ಖರ ದಿನವನ್ನಾಗಿ ಆಚರಿಸಿ ಅವರ ಬುದ್ಧಿವಂತಿಕೆಗೆ ಸೂಕ್ತ ಗೌರವವನ್ನು ಸೂಚಿಸಿ: ಜಿಲ್ಲಾ ಬಿಜೆಪಿ ಯುವ ಮೋರ್ಚಾ ವ್ಯಂಗ್ಯ

ದಾವಣಗೆರೆ.ಸೆ.19: ಕಾಂಗ್ರೆಸ್ ಯುವ ಘಟಕವು ಪ್ರಧಾನಿ ಮೋದಿ ಅವರ ಜನ್ಮದಿನವನ್ನು ನಿರುದ್ಯೋಗಿಗಳ ದಿನವನ್ನಾಗಿ ಆಚರಿಸುವುದಕ್ಕಿಂತ ರಾಹುಲ್ ಗಾಂಧಿಯವರ ಜನ್ಮದಿನವನ್ನು ರಾಷ್ಟ್ರೀಯ ಮೂರ್ಖರ ದಿನವನ್ನಾಗಿ ಆಚರಿಸಿ ಈ ಮೂಲಕ ರಾಹುಲ್ ಗಾಂಧಿಯವರಿಗೆ ಮತ್ತು ಅವರ ಬುದ್ಧಿವಂತಿಕೆಗೆ ಸೂಕ್ತ ಗೌರವವನ್ನು ಸೂಚಿಸಬೇಕೆಂದು ದಾವಣಗೆರೆ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಆರ್.ಎಲ್.ಶಿವಪ್ರಕಾಶ್ ಮಾತನಾಡಿ, ಸತ್ಯ, ಪಾರದರ್ಶಕತೆ ಮತ್ತು ಪ್ರಾಮಾಣಿಕತೆಗೆ ಬೆಲೆ ಕೊಡುವುದಾದರೆ ಪ್ರಧಾನಿ ನರೇಂದ್ರ ಮೋದಿಯವರು ರಾಜೀನಾಮೆ ನೀಡಬೇಕೆಂದು ರಾಷ್ಟ್ರೀಯ ಯುವ ಕಾಂಗ್ರೆಸ್ ಕಾರ್ಯದರ್ಶಿಯ ಹೇಳಿಕೆಯನ್ನು ಗಮನಿಸಿದರೆ "ಭೂತದ ಬಾಯಲ್ಲಿ ಭಗವದ್ಗೀತೆ" ಕೇಳಿದಂತೆ ಭಾಸವಾಗುತ್ತದೆ ಎಂದು ವ್ಯಂಗ್ಯವಾಡಿದರು. ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯ ಬಗ್ಗೆ ಮಾತನಾಡುವ ಯಾವ ನೈತಿಕತೆಯನ್ನು ಕಾಂಗ್ರೆಸ್ ಪಕ್ಷ ಉಳಿಸಿಕೊಂಡಿಲ್ಲ. 2004 ರಿಂದ 2014ರವರೆಗೆ ಕಾಂಗ್ರೆಸ್ ಸರ್ಕಾರ ನಡೆಸಿದ ಭ್ರಷ್ಟಾಚಾರದ ಸರಮಾಲೆಯೇ ಅವರ ನೈತಿಕತೆಗೆ ಹಿಡಿದ ಕೈಗನ್ನಡಿಯಾಗಿದೆ. ಮೋದಿ ಪ್ರಧಾನಿಯಾಗಿ 11 ವರ್ಷ ಕಳೆದರೂ ಅವರ ಮೇಲೆ ಯಾವುದೇ ಭ್ರಷ್ಟಾಚಾರದ ಆರೋಪ ಇಲ್ಲ. ಕಾಂಗ್ರೆಸ್ 70 ವರ್ಷ ಮಾಡದ ಅಭಿವೃದ್ಧಿ ಕೆಲಸಗಳನ್ನು ಮೋದಿ ಹಂತವಾಗಿ ಹಂತವಾಗಿ ಮಾಡುತ್ತ ಬಂದಿದ್ದಾರೆ. ಕಾಂಗ್ರೆಸ್ ಯುವ ಘಟಕ ಮೋದಿ ಅವರ ಸಾಧನೆಗಳ ಬಗ್ಗೆ ತಿಳಿದು ಮಾತನಾಡಲಿ ಎಂದರು. ಕಾಂಗ್ರೆಸ್ಸಿಗರ ಬಾಯಲ್ಲಿ ಬರುವುದು ಬಿಜೆಪಿ ಕೋಮುವಾದ ಪಕ್ಷವೆಂದು, ಹಾಗಾದರೆ ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದು ಏನು? ಮುಸ್ಲಿಮರನ್ನು ಓಲೈಸಿಕೊಳ್ಳಲು ಶೈಕ್ಷಣಿಕತೆಯಲ್ಲಿ ಧರ್ಮಾದಾರಿತವಾಗಿ ಮೀಸಲಾತಿಯನ್ನು ನೀಡುತ್ತಿರುವುದು ಕೋಮುವಾದವಲ್ಲವೇ? ಅದೇ ರೀತಿಯಲ್ಲಿ ಹಿಂದೂ ಸಮಾಜವನ್ನು ಒಡೆಯಲು ಜಾತಿಗಣತಿ ಹೆಸರಿನಲ್ಲಿ ಪ್ರವೃತ್ತರಾಗಿರುವುದು ಕೋಮುವಾದವಲ್ಲವೇ? ಇಲ್ಲಿಯ ತನಕ ಯಾರು ಕೇಳದ ಕ್ರಿಶ್ಚಿಯನ್ ಕುರುಬ, ಕ್ರಿಶ್ಚಿಯನ್ ಮಡಿವಾಳ, ಹೀಗೆ ಹತ್ತು ಹಲವು ಜಾತಿಗಳನ್ನು ಸೃಷ್ಟಿಸಿ ಹಿಂದೂಗಳ ಮಧ್ಯೆ ಕಂದಕ ಸೃಷ್ಟಿಸುತ್ತಿರುವುದು ಕೋಮುವಾದವಲ್ಲವೇ? ಎಂದು ಪ್ರಶ್ನೆ ಮಾಡಿದರು.

# ಜಗಳೂರು: ತಾ.ಪಂ.ಯ ಮಳಿಗೆಗಳ ಬಾಡಿಗೆ ಬಾಕಿ 20 ಲಕ್ಷ ರೂ. ಬಾಡಿಗೆ ಪಾವತಿಸದ ಮಳಿಗೆ ಮಾಲೀಕರಿಗೆ ತಾ.ಪಂನಿಂದ ನೋಟಿಸ್



**ಜಗಳೂರು:** 2020ರಲ್ಲಿ ಮಳಿಗೆಗಳ ಕರಾರಿನಂತೆ ನಾಲ್ಕು ವರ್ಷ 11 ತಿಂಗಳಿಗೆ ಮಳಿಗೆಗಳ ಬಾಡಿಗೆ ಕರಾರು ಪ್ರಸ್ತುತ ವರ್ಷ ಜೂ.30ಕ್ಕೆ ಅಂತ್ಯಗೊಂಡಿದ್ದು, ಮಳಿಗೆಗಳ ಬಾಡಿಗೆ ಬಾಕಿ 20 ಲಕ್ಷ ರೂ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ತಾ.ಪಂ. ಅಧೀನದ 29 ಮಳಿಗೆ ಮಾಲೀಕರಿಗೆ ನೋಟಿಸ್ ನೀಡಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಯೋಜನಾಧಿಕಾರಿ ಮಲ್ಲಾನಾಯ್ಕ್ ಹೇಳಿದರು.

ಪಂಚಾಯತ್ ರಾಜ್ ಸಂಸ್ಥೆಯ ಅಧಿಕಾರದನ್ವಯ ತಹಶೀಲ್ದಾರ್ ಕಚೇರಿ ಎದುರು ಇರುವ ಮಳಿಗೆಗಳ ಮಾಲೀಕರು ಬಾಡಿಗೆ ಪಾವತಿಸದ ಕಾರಣ ಶುಕ್ರವಾರ ಜಿಪಂ ಯೋಜನಾಧಿಕಾರಿ ಮಲ್ಲಾನಾಯ್ಕ್ ಮತ್ತು ಇಒ ಕೆಂಚಪ್ಪ ಖುದ್ದು ನಿಂತು ಮಳಿಗೆಗಳಿಗೆ ನೋಟಿಸ್ ಅಂಟಿಸಿದ ನಂತರ ಮಾತನಾಡಿದ ಅವರು ಅವದಿ ಮುಕ್ತಾಯಗೊಂಡು ಮೂರು ತಿಂಗಳಾದರೂ ಬಾಡಿಗೆ ಪಡೆದ ಮಾಲೀಕರು ಸರಕಾರಕ್ಕೆ 20 ಲಕ್ಷ ರೂ ಬಾಕಿ ಬಾಡಿಗೆ ಮೊತ್ತ ಪಾವತಿಸಿಲ್ಲ. ಈಗಾಗಲೇ ಸರಕಾರದ ನಿಯಮದಂತೆ ಕರಾರು ಅವದಿ ಮುಗಿದಿದೆ. ಮಾಲೀಕರಿಗೆ ಮೂರು ಬಾರಿ ನೋಟಿಸ್ ನೀಡಲಾಗಿದೆ. ಆದರೂ ಬಾಡಿಗೆ ಪಾವತಿಸಿಲ್ಲ. ಮೂರನೇ ನೋಟಿಸ್ ನೀಡಿದ ತಕ್ಷಣ ತೆರವುಗೊಳಿಸುತ್ತೇವೆ ಎಂದು ಎಲ್ಲ ಮಾಲೀಕರು ಮಳಿಗೆಗಳಿಗೆ ಬೀಗ ಹಾಕಿದ್ದಾರೆ. ಆದರೂ ಇದುವರೆಗೂ ತೆರವುಗೊಳಿಸಿಲ್ಲ. ಸೆ.25ರ ಒಳಗಾಗಿ ಬಾಡಿಗೆ ಕಟ್ಟಿ ಮಾಲೀಕರ ತಮ್ಮ ಸ್ವತ್ತುಗಳನ್ನು ಎತ್ತಂಗಡಿ ಮಾಡಬೇಕು ಎಂದು ಪ್ರತಿ ಮಳಿಗೆಗಳ ಮುಂದೆ ನೋಟಿಸ್ ಅಂಟಿಸಲಾಗಿದೆ ಎಂದರು.

**ಸರ್ಕಾರಕ್ಕೆ ನಷ್ಟ:** ಪ್ರತಿ ತಿಂಗಳು 5 ಸಾವಿರೂ ನಿಗದಿ ಪಡಿಸಿದ ಮಳಿಗೆ ಬಾಡಿಗೆಯನ್ನು ಇದುವರೆಗೂ ಕಟ್ಟಿಲ್ಲ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಖಾಲಿ ಮಾಡಿ ಎಂದು ಗಡವು ಕೊಟ್ಟಿದ್ದೆವೆ. ಆದರೂ ಸಹ ಯಾರೂ ಮುಂದೆ ಬರುತ್ತಿಲ್ಲ. ಇಷ್ಟು ವರ್ಷ ಇದ್ದವರು ಬಾಡಿ ಕಟ್ಟಿ ಮತ್ತೆ ಮಳಿಗೆಗಳು ಬೇಕು ಎಂದು ಮುಂದೆ ಬಂದು ಬಹಿರಂಗ ಹರಾಜಿನಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಬಾಕಿ 20 ಲಕ್ಷ ರೂ ವಸೂಲಿ ಆದ ಮೇಲೆಯೇ ಮಳಿಗೆ ಹರಾಜು ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

**ಸೆಪ್ಟಂಬರ್ 25ರ ಒಳಗಾಗಿ ಮಾಲೀಕರು ಮಳಿಗೆಗಳನ್ನು ಖಾಲಿಮಾಡಬೇಕು:** ತಾಪಂ ಇಒ ಕೆಂಚಪ್ಪ ಮಾತನಾಡಿ, ಸರಕಾರದ ಅನುದಾನದ ಅಡಿಯಲ್ಲಿ ನಿರ್ಮಾಣ ಮಾಡಿರುವ ಮಳಿಗೆಗಳಿಗೆ ಪಾವತಿಸಬೇಕಾದ ಬಾಡಿಗೆ ಬಾಕಿ ಮೊತ್ತ ಪಾವತಿಸದ ಕಾರಣ ಸರಕಾರಕ್ಕೆ ನಷ್ಟವಾಗುತ್ತಿದೆ. ನಿಯಮಗಳ ಅನುಸಾರ ಅವದಿ ಮುಗಿದ ಕಾರಣ ಹೊಸದಾಗಿ ಹರಾಜು ಕೂಗಲು ಸಮಯ ನಿಗದಿ ಪಡಿಸಲಾಗುವುದು. ಮಳಿಗೆಗಳ ರಿಪೇರಿ, ಸುಣ್ಣ ಬಣ್ಣ ಮಾಡಿಸುವ ಕಾರ್ಯವಿದೆ. ಸೆಪ್ಟಂಬರ್ 25ರ ಒಳಗಾಗಿ ಮಾಲೀಕರು ಮಳಿಗೆಗಳನ್ನು ಖಾಲಿಮಾಡಬೇಕು. ಇಲ್ಲವಾದರೆ ಕಾನೂನು ರೀತಿ ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

# ಎಸ್ಟಿಗೆ 'ಕುರುಬ' ಜಾತಿ ಸೇರ್ಪಡೆ ನಿರ್ಧಾರಕ್ಕೆ ಖಂಡನೆ

## ಜಗಳೂರಿನಲ್ಲಿ ಎಲ್.ಜಿ. ಹಾವನೂರು ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ

**ಜಗಳೂರು:** ನಕಲಿ ಜಾತಿ ಪ್ರಮಾಣ ಪತ್ರ ಪಡೆಯುವವರು ಹಾಗೂ ಕುರುಬ ಜಾತಿ ಸೇರಿದಂತೆ, ಇತರೆ ಜಾತಿಗಳನ್ನು ಪರಿಶಿಷ್ಟಪಂಗಡಕ್ಕೆ ಸೇರಿಸಲು ಹೊರಟಿರುವ ರಾಜ್ಯ ಸರಕಾರದ ವಿರುದ್ಧ ಎಲ್.ಜಿ. ಹಾವನೂರು ತಾಲ್ಲೂಕು ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಮಹಾತ್ಮಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಚೇರಿ ಮುಂಭಾಗ ಜಮಾಯಿಸಿ ತಹಶೀಲ್ದಾರ್ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸಮಿತಿ ತಾಲ್ಲೂಕು ಅಧ್ಯಕ್ಷ ರಾಜನಹಟ್ಟಿ ರಾಜು ಮಾತನಾಡಿ, ರಾಜ್ಯ ಸರ್ಕಾರವು ಮೊನ್ನೆ ಕುರುಬ ಸಮುದಾಯ ಸೇರಿದಂತೆ ಇತರೆ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಸಭೆ ನಡೆಸಿರುವುದು ಸರಿಯಷ್ಟೆ. ಈಗಾಗಲೇ ಪರಿಶಿಷ್ಟ ಸಮುದಾಯದಲ್ಲಿ ಹಲವು ಜಾತಿಗಳಿದ್ದು, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕುಂಠಿತವಾಗಿರುವುದು ಶೋಚನೀಯ ಸಂಗತಿಯಾಗಿದೆ. ಈ ಮಧ್ಯೆ ಪರಿಶಿಷ್ಟ ಪಂಗಡದ ಪಟ್ಟಿಗೆ ಮತ್ತಷ್ಟು ಜಾತಿಗಳನ್ನು ಸೇರ್ಪಡೆಗೆ ಕೈಗೊಂಡಿರುವ ನಿರ್ಧಾರದಿಂದ ಪರಿಶಿಷ್ಟ ಪಂಗಡದಲ್ಲಿರುವ ಸಮುದಾಯಗಳಿಗೆ ಆಘಾತವನ್ನುಂಟು ಮಾಡಿದೆ. ಕೂಡಲೇ ಸರ್ಕಾರದ ನಿರ್ಧಾರವನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಎಸ್.ಟಿ. ಸಮುದಾಯದ ನಕಲಿ ಜಾತಿ ಪ್ರಮಾಣ ಪತ್ರ ಪಡೆದುಕೊಂಡು ಸೌಲಭ್ಯ ಪಡೆದುಕೊಳ್ಳುತ್ತಿರುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಗೌರವಾಧ್ಯಕ್ಷ ಗೌಡಗೊಂಡನಹಳ್ಳಿ ಸತೀಶ್, ಉಪಾಧ್ಯಕ್ಷ ಯರಲಕಟ್ಟೆ ಕೆಂಚಪ್ಪ, ಪದಾಧಿಕಾರಿಗಳಾದ ತಿಪ್ಪೇಶ್, ಮಲ್ಲೇಶ್, ಗಂಗಾಧರಪ್ಪ, ತಿಮ್ಮೇಶ್, ಸಿಎಂ ಹೊಳೆ ಚಿರಂಜೀವಿ, ರವಿಕುಮಾರ್, ಆನಂದ, ತಿಪ್ಪೇಸ್ವಾಮಿ, ರೇವಣ್ಣ, ಧ್ರುವ, ಶರಣಪ್ಪ, ಮತ್ತಿತರರು ಭಾಗವಹಿಸಿದ್ದರು.

# ಅನುಸೂಚಿತ ಜಾತಿ-ಪಂಗಡಗಳ 108 ದೌರ್ಜನ್ಯ ಪ್ರಕರಣಗಳಿಗೆ 1.44 ಕೋಟಿ ರೂ. ಪರಿಹಾರ

**ಚಿಕ್ಕಮಗಳೂರು, ಸೆ.19:** ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳ ದೌರ್ಜನ್ಯದ 108 ಪ್ರಕರಣಗಳಿಗೆ ಸಂಬಂಧಿಸಿದಂತೆ 2022 ರಿಂದ 2025ರ ಸೆಪ್ಟಂಬರ್ 17 ರವರೆಗೆ 1 ಕೋಟಿ 44 ಲಕ್ಷ 63 ಸಾವಿರ ರೂ.ಗಳನ್ನು ಮಂಜೂರು ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಸಿ.ಎನ್. ಹೇಳಿದರು.




ಇಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಿಲ್ಲಾ ಮಟ್ಟದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದಲ್ಲಿನ ಸಮಸ್ಯೆಗಳನ್ನು ತಾಲ್ಲೂಕು ಮಟ್ಟದ ಸಮಿತಿ ಸಭೆಯಲ್ಲಿ ಚರ್ಚಿಸಿ ಪರಿಹರಿಸಿಕೊಳ್ಳುವಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಜಿಲ್ಲಾಧಿಕಾರಿಗಳು, ತಾಲೂಕುಗಳಲ್ಲಿ ಸಭೆ ನಡೆಸುವುದರಿಂದ ಪ್ರಕರಣಗಳ ಮೇಲಿನ ನಿಗಾಕ್ಕೆ ಹಾಗೂ ನಿಯತ್ರಣಕ್ಕೆ ತುಂಬಾ ಅನುಕೂಲವಾಗಲಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯ ಎಸಗಿದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತದೆ ಹಾಗೂ ದೌರ್ಜನ್ಯ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿರುವ ಪ್ರದೇಶಗಳಿಗೆ ಪೊಲೀಸ್ ಅಧಿಕಾರಿಗಳು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಜನರಲ್ಲಿ ಜಾಗೃತಿ ಹಾಗೂ ಕಾನೂನಿನ ಅರಿವು ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿಕ್ರಮ್ ಅಮಟೆ ಮಾತನಾಡಿ, ದೌರ್ಜನ್ಯ ಪ್ರಕರಣಕ್ಕೆ ಒಳಗದವರು ಬಡವರು, ಕೂಲಿ ಕಾರ್ಮಿಕರೂ ಆಗಿರುತ್ತಾರೆ. ಪ್ರಕರಣ ದಾಖಲಿಸಲು ಬರುವಾಗ ಗುರುತಿನ ಚೀಟಿ, ಆಧಾರ್ ಕಾರ್ಡ್‌ಗಳನ್ನು ತರುವಂತೆ ತಿಳಿಸಿದ ಅವರು, ಬಂದು ಹೋಗುವ ವೆಚ್ಚವನ್ನು ಸಮಾಜ ಕಲ್ಯಾಣ ಇಲಾಖೆ ಭರಿಸಲಿದೆ ಎಂದು ತಿಳಿಸಿದರು.

ಮುಖಂಡರುಗಳು ತಮ್ಮ ವ್ಯಾಪ್ತಿಗೆ ಬರುವ ಸಮುದಾಯದಲ್ಲಿ ಸಭೆಯನ್ನು ಕರೆದು ಅವರಿಗೆ ಕಾನೂನಿನ ಅರಿವು ಮೂಡಿಸುವಂತೆ ಸೂಚಿಸಿದರು.

ಇತ್ತೀಚಿನ ದಿನದಲ್ಲಿ ಪೋಕ್ಸೊ ಪ್ರಕರಣ ಹೆಚ್ಚಾಗಿದ್ದು, 15, 16, 17, 18 ವರ್ಷದ ಮಕ್ಕಳು ಹೆಚ್ಚಾಗಿ ಈ ಪ್ರಕರಣಕ್ಕೆ ತುತ್ತಾಗುತ್ತಿದ್ದಾರೆ ಎಂದ ಅವರು, ಕೆಲವೊಂದು ಸಮುದಾಯದಲ್ಲಿ ಈ ಪ್ರಕರಣಗಳು ತಲೆಯೆತ್ತುತ್ತಿವೆ. ಶಾಲೆ ಬಿಟ್ಟ ಹೆಣ್ಣು ಮಕ್ಕಳನ್ನು ಶಾಲೆಗೆ ಹೋಗಲು ಪ್ರೇರೇಪಿಸಬೇಕು. ಸ್ಥಳೀಯ ಮುಖಂಡರು ಇಂತಹ ಮಕ್ಕಳನ್ನು ಗುರುತಿಸಿ ಅಧಿಕಾರಿಗಳ ಗಮನಕ್ಕೆ ತಂದರೆ ಅಂತವರನ್ನು ಪುನಃ ಶಾಲೆಗೆ ಸೇರಿಸಿ ವಿದ್ಯಾಭ್ಯಾಸ ಮುಂದುವರಿಸಲು ಕ್ರಮ ವಹಿಸುವರು ಎಂದು ಹೇಳಿದರು.

ಸಭೆಯಲ್ಲಿ ಜಿ.ಪಂ.ಉಪ ಕಾರ್ಯದರ್ಶಿ ಶಂಕರ ಕೊರವರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಬಿ.ಮಾಲತಿ, ಸರ್ಕಾರಿ ಅಭಿಯೋಜಕರಾದ ಲೋಹಿತಾಚಾರ್ಯ, ಎಲ್ಲಾ ತಾಲ್ಲೂಕುಗಳ ತಹಸೀಲ್ದಾರರು, ಹಾಜರಿದ್ದರು.

## ರಾಶಿ ಭವಿಷ್ಯ

### ಮೇಷ ರಾಶಿ

ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನಿಮ್ಮ ಹೂಡಿಕೆಗಳು ಬಗ್ಗೆ ನಿಮ್ಮ ಭವಿಷ್ಯದ ಗುರಿಗಳ ಬಗ್ಗೆ ರಹಸ್ಯಮಯವಾಗಿರಿ. ದಿನದ ಕೊನೆಯಲ್ಲಿ ಒಬ್ಬ ಹಳೆಯ ಸ್ನೇಹಿತರ ಭೇಟಿ ನಿಮ್ಮ ಸಂಜೆಯನ್ನು ಬೆಳಗಿಸುತ್ತದೆ. ನೀವು ಆ ಸುವರ್ಣ ದಿನಗಳನ್ನು ನೆನಪಿಸಿಕೊಳ್ಳುವ ಜೊತೆ ನಿಮ್ಮ ಬಾಲ್ಯದ ಸವಿನೆನಪುಗಳನ್ನೂ ಆನಂದಿಸುತ್ತೀರಿ.

### ವೃಷಭ ರಾಶಿ

ನೀವು ಅಭಿಪ್ರಾಯ ನೀಡುವಾಗ ಇತರರ ಭಾವನೆಗಳನ್ನು ವಿಶೇಷವಾಗಿ ಪರಿಗಣಿಸಿ. ನೀವು ಮಾಡಿದ ಯಾವುದೇ ತಪ್ಪು ನಿರ್ಧಾರ ಅವರಿಗೆ ಮಾತ್ರ ವ್ಯತಿರಿಕ್ತ ಪರಿಣಾಮ ಉಂಟುಮಾಡದೇ ನಿಮಗೂ ಮಾನಸಿಕ ಒತ್ತಡ ನೀಡುತ್ತದೆ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯ ಕಾರಣದಿಂದ ತೊಂದರೆಗೊಳಗಾಗಬಹುದು. ಇದಕ್ಕಾಗಿ ನೀವು ನಿಮ್ಮ ಯಾವುದೇ ವಿಶ್ವಾಸಾರ್ಹರಿಂದ ಸಲಹೆಯನ್ನು ತೆಗೆದುಕೊಳ್ಳಬೇಕು.

### ಮಿಥುನ ರಾಶಿ

ಸಾಮಾಜಿಕ ಜೀವನಕ್ಕಿಂತ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ. ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿಮ್ಮ ಸಹಾಯ ಕೇಳುವ ಒಬ್ಬ ವಯಸ್ಸಾದ ಹಿರಿಯರಿಂದ ಆಶೀರ್ವಾದ. ಇಂದು ನೀವು ನಿಮ್ಮ ಸ್ನೇಹಿತನ ಅನುಪಸ್ಥಿತಿಯಲ್ಲಿ ಅವರ ಸುಗಂಧವನ್ನು ಅನುಭವಿಸುತ್ತೀರಿ. ಕೆಲಸದ ಬದಲಾವಣೆ ನಿಮಗೆ ಮಾನಸಿಕ ತೃಪ್ತಿ ನೀಡುತ್ತದೆ.

### ಕರ್ಕ ರಾಶಿ

ಅನಂತ ಚೇತನ್ಯ ಮತ್ತು ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ. ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ. ಹಠಾತ್ ಪ್ರಣಯ ಪ್ರಸಂಗಗಳು ನಿಮ್ಮನ್ನು ಗೊಂದಲಕ್ಕಿಡು ಮಾಡಬಹುದು.

### ಸಿಂಹ ರಾಶಿ

ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಬಯಕೆ ಮತ್ತು ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ಭವಿಷ್ಯದಲ್ಲಿ ನೀವು ಆರ್ಥಿಕವಾಗಿ ಬಲವಾಗಿರಬೇಕೆಂದು ಬಯಸಿದರೆ ಇಂದಿನಿಂದಲೇ ಹಣವನ್ನು ಉಳಿಸಿ. ನಿಮ್ಮ ಸಹೋದರನಿಗೆ ವಿಷಯಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಸಹಾಯ ಮಾಡಿ. ವ್ಯಾಜ್ಯಗಳನ್ನು ಅನಗತ್ಯವಾಗಿ ಹೆಚ್ಚಿಸದೇ ಅವುಗಳನ್ನು ಸೌಹಾರ್ದತೆಯಿಂದ ಪರಿಹರಿಸಲು ಪ್ರಯತ್ನಿಸಿ.

### ಕನ್ಯಾ ರಾಶಿ

ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ. ನಿಮ್ಮ ಸಂಗಾತಿಯ ಪ್ರೀತಿ ನಿಜವಾಗಿಯೂ ಭಾವಪೂರ್ಣವಾಗಿದೆ ಎಂದು ಇಂದು ನೀವು ತಿಳಿದುಕೊಳ್ಳುತ್ತೀರಿ.

### ತುಲಾ ರಾಶಿ

ನೀವು ಮನಸ್ಸಿನ ಸಮಸ್ಯೆಗಳನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ, ಜಾಣತನ ಮತ್ತು ಸಭ್ಯತೆಯನ್ನು ಬಳಸಬೇಕಾಗುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು. ಇಂದು ನೀವು ಇತರರ ಅಗತ್ಯಗಳಿಗೆ ಗಮನ ನೀಡಬೇಕಾದರೂ ಮಕ್ಕಳೊಂದಿಗೆ ಅತೀ ಉದಾರತೆ ತೋರಿಸುವುದು ತೊಂದರೆಗೆ ಕಾರಣವಾಗುತ್ತದೆ.

### ವೃಶ್ಚಿಕ ರಾಶಿ

ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು. ನೀವು ಎಲ್ಲರ ಬೇಡಿಕೆಗಳನ್ನೂ ಪೂರೈಸಲು ಪ್ರಯತ್ನಿಸಿದಲ್ಲಿ ವಿವಿಧ ದಿಕ್ಕುಗಳಲ್ಲಿ ಹರಿದು ಹೋಗುತ್ತೀರಿ. ಧಾರ್ಮಿಕ ಮತ್ತು ಶುದ್ಧ ಪ್ರೀತಿಯನ್ನು ಅನುಭವಿಸಿ.

### ಧನು ರಾಶಿ

ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ. ದುಷ್ಟತೆಯು ಒಳಿತಿಗಿಂತ ಬೇಗ ವಿಜಯ ಸಾಧಿಸುತ್ತದೆಂದು ನೆನಪಿಡಿ. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ಸ್ನೇಹಿತರೊಂದಿಗಿನ ಸಂಜೆ ಆನಂದ ಹಾಗೂ ಕೆಲವು ರಜಾ ಯೋಜನೆಗಳಿಗೆ ಉತ್ತಮವಾಗಿರುತ್ತದೆ.

### ಮಕರ ರಾಶಿ

ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ. ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ ಇವು ನಿಮ್ಮ ಮನಸ್ಸಿನ ಮೇಲೆ ಒತ್ತಡ ತರುತ್ತವೆ.

### ಕುಂಭ ರಾಶಿ

ನಿಮಗೇನು ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು – ಆದ್ದರಿಂದ ಧೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ ಮತ್ತು ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ಧವಾಗಿರಿ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು ಮತ್ತು ನಿಮ್ಮ ಸಾಕಷ್ಟು ಹಣವು ಖರ್ಚಾಗಬಹುದು ನೀವು ನಂಬಿ ಅಥವಾ ಬಿಡಿ ನಿಮ್ಮ ಬಳಿಯಿರುವ ಯಾರಾದರೂ ನಿಮ್ಮನ್ನು ಅತ್ಯಂತ ನಿಕಟವಾಗಿ ಗಮನಿಸುತ್ತಿದ್ದಾರೆ.

### ಮೀನ ರಾಶಿ

ನಿಮ್ಮ ಹಾಸ್ಯಪ್ರಜ್ಞೆ ಇನ್ನೊಬ್ಬರಿಗೆ ಸಂತೋಷ ವಸ್ತುಗಳನ್ನು ಹೊಂದುವುದರಲ್ಲದೇ ನಮ್ಮೊಳಗೇ ಇದೆಯೆಂದು ಅರ್ಥ ಮಾಡಿಸುವುದರಿಂದ ಅವರು ಸ್ವತಃ ಈ ಕೌಶಲ್ಯವನ್ನು ಹೊಂದಲು ಪ್ರೋತ್ಸಾಹಿಸಿದಂತಾಗುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು ಮತ್ತು ನೀವು ಹಣದ ಲಾಭವನ್ನು ಪಡೆಯಬಹುದು.

# ಮನುಷ್ಯ ಸಂಬಂಧ ತುಂಡರಿಸುವ ಮೋದಿ ಮೇನಿಯಾ

ಕೆಲವು ವ್ಯಕ್ತಿಗಳನ್ನು ಒಳ್ಳೆಯವರು, ಸಜ್ಜನರು ಎಂದು ಅನುಭವದ ಮೂಲಕ ತಿಳಿದುಕೊಂಡಿರುತ್ತೇವೆ,ಇದ್ದಕ್ಕಿದ್ದ ಹಾಗೆ ಒಂದು ದಿನ ಅವರ ಕೆಡುಕಿನ ಇನ್ನೊಂದು ಮುಖದ ದರ್ಶನವಾದಾಗ ಆಘಾತವಾಗುತ್ತದೆ. ಇನ್ನು ಕೆಲವರು ಕೆಡುಕಿನ ಮುಖದ ಜೊತೆಯಲ್ಲಿಯೇ ಪರಿಚಯವಾಗುತ್ತಾರೆ, ಅವರ ಬಗ್ಗೆ ನಿರಾಶೆ,ಆಘಾತ ಯಾವುದೂ ಆಗುವುದಿಲ್ಲ. ಮೋದಿಯವರೇ, ನನ್ನ ಪಾಲಿಗೆ ನೀವು ಎರಡನೇ ಗುಂಪಿಗೆ ಸೇರಿದವರು.

2002ರ ಗುಜರಾತ್ ಗಲಭೆಯ ವೇಳೆ ಅಹ್ಮದಾಬಾದ್ ನ ಅಲಂಶಹಾ ಕ್ಯಾಂಪಿನಲ್ಲಿ ಗಾಯಗೊಂಡು ನರಳಾಡುತ್ತಿದ್ದ ಬಿದ್ದಿದ್ದ ಅಮಾಯಕರ ನೋಯುತ್ತಿರುವ ಮುಖಗಳಲ್ಲಿಯೇ ಮೊದಲು ನಾನು ನಿಮ್ಮನ್ನು ನೋಡಿದ್ದು. ಆಗ ನೀವು ಆ ರಾಜ್ಯದ ಮುಖ್ಯಮಂತ್ರಿಗಳು. ನೀವು ಒಪ್ಪಿಕೊಳ್ಳದೆ ಇದ್ದರೂ ನಿಮಗೆ ಚೆನ್ನಾಗಿ ಗೊತ್ತು. ಮನಸ್ಸು ಮಾಡಿದ್ದರೆ ಗೋದ್ರಾ ನಂತರದ ದುರ್ಘಟನೆಗಳನ್ನುನೀವು ತಪ್ಪಿಸಬಹುದಿತ್ತು. "ಆ ದಿನಗಳನ್ನು" ನೋಡಿದ ಮೇಲೆ ನೀವು ಎಷ್ಟೇ ಸಾಧನೆ ಮಾಡಿದರೂ, ಹೆಸರು,ಖ್ಯಾತಿ ಪಡೆದರೂ ನಿಮ್ಮನ್ನು ಅಭಿಮಾನದಿಂದ ಕಾಣಲು ಸಾಧ್ಯವೇ ಇಲ್ಲ. ಸುಮಾರು 2000 ಅಮಾಯಕ ಜನ ಪ್ರಾಣ ಕಳೆದುಕೊಂಡ ಆ ಹತ್ಯಾಕಾಂಡದ ಬಗ್ಗೆ ಇಲ್ಲಿಯ ವರೆಗೆ ಕನಿಷ್ಠ ವಿಷಾದವನ್ನೂ ಸೂಚಿಸದ ನಿಮ್ಮನ್ನು ಯಾರಾದರೂ ಹೇಗೆ ಕ್ಷಮಿಸಲು ಸಾಧ್ಯ?

ನಾನು ನಿಮ್ಮನ್ನು ನೋಡಿದ್ದಕ್ಕಿಂತ ಸರಿಯಾಗಿ ಹತ್ತು ವರ್ಷಗಳ ಹಿಂದೆ ನಿಮ್ಮನ್ನು ಸಂದರ್ಶನ ಮಾಡಿದ್ದ ಖ್ಯಾತ ರಾಜಕೀಯ ಮನಶಾಸ್ತ್ರಜ್ಞ ಆಶೀಷ್ ನಂದಿ ಅವರು ನಿಮ್ಮ ಬಗ್ಗೆ ಒಂದು ಚಿತ್ರವನ್ನು ಕಟ್ಟಿ ದೇಶದ ಮುಂದಿಟ್ಟಿದ್ದರು. ಅವರ ಪ್ರಕಾರ ನೀವೊಬ್ಬ ಛಿಟಛುಟಿಛಿ, ಛಿಟುಟುಛಿಛಿಟ ಛಿಛಿಜ ಠಜಿ ಚಿ ಜಿಛಿಛಿಛುಣ.' ಅವರು ನಿಮ್ಮನ್ನು ನಿಮ್ಮ ಸಾಮರ್ಥ್ಯವನ್ನು ಮೀರಿ ವಿಜೃಂಭಿಸಲು ಹೊರಟಿದ್ದಾರೆ ಎಂದು ನಾನು ಆ ಕಾಲದಲ್ಲಿ ತಿಳಿದುಕೊಂಡಿದ್ದೆ. ಅವರ ಅಭಿಪ್ರಾಯ ಸುಳ್ಳಾಗಲು ನೀವು ಬಿಡಲಿಲ್ಲ.

ಉಳಿದ ವಿವರಗಳಿಗೆಲ್ಲ ಹೋಗುವುದಿಲ್ಲ. ವೈಯಕ್ತಿಕವಾಗಿ ನಾನು ಯಾಕೆ ನಿಮ್ಮನ್ನು ದ್ವೇಷಿಸಬೇಕೆನಿಸುವಷ್ಟು ವಿರೋಧಿಸುತ್ತೇನೆ ಎಂದು ಹೇಳಿಬಿಡುತ್ತೇನೆ. ನನ್ನ ವಿರೋಧ ಇರುವುದು ನೀವೊಬ್ಬ ಕೋಮುವಾದಿ, ಭ್ರಷ್ಟಾಚಾರಿ, ಸರ್ವಾಧಿಕಾರಿ ಎನ್ನುವ ಕಾರಣಕ್ಕೆ ಮಾತ್ರ ಅಲ್ಲ. ಜವಾಹರಲಾಲ ನೆಹರು ಮತ್ತು ಲಾಲ್ ಬಹದ್ದೂರು ಶಾಸ್ತ್ರಿಯವರ ನಂತರದ ಎಲ್ಲ ಪ್ರಧಾನಿಗಳು ಇಂತಹ ಆರೋಪಗಳನ್ನು ಎದುರಿಸಿದ್ದಾರೆ. ಕಾಂಗ್ರೆಸ್ ಪಕ್ಷದಿಂದ ಪ್ರಧಾನಿಗಳಾದವರ ಮೇಲೆಯೂ ಕೋಮುವಾದದ ವಿಷಯದಲ್ಲಿ ರಾಜಿಮಾಡಿಕೊಂಡಿರುವ ಆರೋಪಗಳಿವೆ. ನಿಮ್ಮದೇ ಪಕ್ಷದ ಅಟಲಬಿಹಾರಿ ವಾಜಪೇಯಿಯವರೂ ಒಬ್ಬ ಕೋಮುವಾದಿಯಾಗಿದ್ದರೂ ಅವರನ್ನು ದ್ವೇಷಿಸಬೇಕೆನಿಸುವಷ್ಟು ವಿರೋಧಿಸಲು ಆಗುತ್ತಿಲ್ಲ.

ಈ ಭ್ರಷ್ಟಾಚಾರ, ಕೋಮುವಾದ ಮತ್ತು ಸರ್ವಾಧಿಕಾರದ ರೂಪ, ಬಣ್ಣ, ವಿನ್ಯಾಸಗಳು ನಿಮ್ಮ ಕಾಲದಲ್ಲಿ ಬದಲಾಗಿರುವುದು ನಿಜವಾದರೂ ನಿಮ್ಮನ್ನು ಭಾರತದ ಮೊದಲ ಭ್ರಷ್ಟ, ಕೋಮುವಾದಿ, ಸರ್ವಾಧಿಕಾರಿ ಪ್ರಧಾನಮಂತ್ರಿ ಎಂದು ನಾನು ಹೇಳಲಾರೆ. ಇಂತಹ ಆರೋಪಗಳನ್ನು ಹೊತ್ತುಕೊಳ್ಳದವರು ಮುಂದಿನ ದಿನಗಳಲ್ಲಿ ದೇಶದ ಪ್ರಧಾನಿಯಾಗುತ್ತಾರೆ ಎನ್ನುವ ಭರವಸೆಯೂ ನನಗಿಲ್ಲ.

ವೈಯಕ್ತಿಕವಾಗಿ ನನಗೆ ನಿಮ್ಮನ್ನು ದ್ವೇಷಿಸುವಷ್ಟು ವಿರೋಧ ಒಳಗಿಂದೊಳಗೆ ಉಕ್ಕುಕ್ಕಿ ಬರುತ್ತಿರುವುದಕ್ಕೆ ಮುಖ್ಯ ಕಾರಣ ಎಂದೆಂದೂ ಸರಿಪಡಿಸಲಾಗದ ರೀತಿಯಲ್ಲಿ ಮನುಷ್ಯ ಸಂಬಂಧಗಳಿಗೆ ನೀವು ಮಾಡಿರುವ ಡ್ಯಾಮೇಜ್. ತಾಯಿ-ಮಗ, ಅಣ್ಣ-ತಮ್ಮ, ಅಕ್ಕ-ತಂಗಿ, ಮಾವ -ಅಳಿಯ, ಗೆಳೆಯರು, ಗೆಳತಿಯರು, ಪ್ರೇಮಿಗಳು, ಕೊನೆಗೆ ಗಂಡ-ಹೆಂಡತಿ ನಡುವೆಯೂ ನೀವು ಪ್ರವೇಶಿಸಿ ಸಂಬಂಧಗಳನ್ನು ಕೆಡಿಸಿದ್ದೀರಿ, ಪ್ರಮಾಣ ಕಡಿಮೆಯಾದರೂ ಈಗಲೂ ಕೆಡಿಸುತ್ತಿದ್ದೀರಿ.



ಹಿಂದೆಲ್ಲ ಒಂದು ಮನೆ, ಕುಟುಂಬ ಮತ್ತು ಊರುಗಳಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳ ಬಗ್ಗೆ ಒಲವು ಹೊಂದಿರುವವರು ಇದ್ದರು ಮತ್ತು ಅವರು ಚುನಾವಣಾ ದಿನಗಳ ಹೊರತಾಗಿ ಸೌಹಾರ್ದಯುತವಾಗಿ ಬದುಕುತ್ತಿದ್ದರು. ಆದರೆ 2014ರ ನಂತರ ಹುಟ್ಟಿಕೊಂಡ "ಮೋದಿ ಭಕ್ತಿ" ಎಷ್ಟೋ ಮನೆಗಳಿಗೆ ಮೂರು ಬಾಗಿಲು ಮಾಡಿದೆ, ಎಷ್ಟೋ ಕುಟುಂಬಗಳನ್ನು ಒಡೆದು ಹಾಕಿದೆ, ಎಷ್ಟೋ ಊರುಗಳು ತುಂಡುತುಂಡಾಗಿವೆ.

ಎಂದೂ ತಾಯಿಗೆ ಎದುರಾಡದ ವಿಧೇಯ ಮಗ ನಿಮ್ಮ ಹೆಸರು ಬಂದಾಗ ಕಣ್ಣುಕೆಂಪಗೆ ಮಾಡಿಕೊಂಡು ಏದುಸಿರು ಬಿಡುತ್ತಾ ತಾಯಿಯ ಜೊತೆ ವಾಗ್ವಾದಕ್ಕೆ ಇಳಿದದ್ದನ್ನು ನಾನು ನೋಡಿದ್ದೇನೆ. ಅಣ್ಣ-ತಮ್ಮಂದಿರು ನಿಮ್ಮ ಕಾರಣಕ್ಕೆ ಕಾದಾಟಕ್ಕೆ ಇಳಿದದ್ದನ್ನು ನೋಡಿದ್ದೇನೆ. ಜೀವಕ್ಕೆ ಜೀವ ಕೊಡುವಂತಹ ಚಡ್ಡಿ ದೋಸ್ತಿಗಳು ನಿಮ್ಮ ಕಾರಣಕ್ಕೆ ಕಾಲು-ಕೈ ಮುರಿದುಕೊಳ್ಳುವಂತಹ ಜಗಳದ ಮಟ್ಟಕ್ಕೆ ಇಳಿದಿರುವುದನ್ನೂ ನೋಡಿದ್ದೇನೆ. ಎಷ್ಟೋ ಪ್ರೇಮ ಸಂಬಂಧಗಳು ಮುರಿದುಬಿದ್ದಿರುವುದನ್ನೂ ನೋಡಿದ್ದೇನೆ. ಇವೆಲ್ಲಕ್ಕೂ ಕನಿಷ್ಠ ಹತ್ತು ಹತ್ತು ಉದಾಹರಣೆಗಳನ್ನು ಕೊಡಬಲ್ಲೆ.

ನೀವು ಬುದ್ದಿಯನ್ನಷ್ಟೇ ಪ್ರವೇಶಿಸಿದ್ದರೆ ಕ್ಷಮಿಸಬಹುದಿತ್ತು, ನೀವು ಹೃದಯವನ್ನೂ ಪ್ರವೇಶಿಸಿದ್ದೀರಿ. ಇದರಿಂದಾಗಿಯೇ ಉಳಿದವರು ಬಿಡಿ ಡಾಕ್ಟರ್ ಗಳು ವಿಜ್ಞಾನಿಗಳು ಕೂಡಾ ಕೊರೊನಾ ದಿನಗಳಲ್ಲಿ ನೀವು ಹೇಳಿದ ಕಾರಣಕ್ಕೆ ತಟ್ಟೆ ಬಡಿದದ್ದನ್ನು ನೋಡಿದ್ದೇನೆ.

ಮನುಷ್ಯನ ಬುದ್ದಿ ಮತ್ತು ಹೃದಯದೊಳಗೆ ಪ್ರವೇಶಿಸಲು ಸಾಮಾಜಿಕ ಮಾಧ್ಯಮದ ಎರಡಲಗಿನ ಕತ್ತಿಯನ್ನು ನೀವು ಬಹಳ ಚಾಣಾಕ್ಷತನದಿಂದ ಬಳಸಿಕೊಳ್ಳುತ್ತಾ ಬಂದಿದ್ದೀರಿ. ಬರ್ತ್ ಡೇ, ಮ್ಯಾರೇಜ್ ನಿವರ್ಸರಿ, ಹಬ್ಬದ ಶುಭಾಶಯಗಳಿಗಷ್ಟೇ ಸೀಮಿತವಾಗಿದ್ದ ವಾಟ್ಸಪ್ ಗ್ರೂಪ್ , ಫೇಸ್ ಬುಕ್, ಟ್ವಿಟರ್, ಇನ್ ಸ್ಟಾಗ್ರಾಂ ಮೊದಲಾದ ಸಾಮಾಜಿಕ ಮಾಧ್ಯಮದ ಟೂಲ್ ಗಳು ನಿಮ್ಮ ಪ್ರವೇಶದ ನಂತರ ನಿಮ್ಮ ಪರ-ವಿರೋಧಧ ಅಖಾಡಗಳಾಗಿಬಿಟ್ಟಿವೆ. ಅದು ಕೇವಲ ಆನ್ ಲೈನ್ ಹೊಡೆದಾಟ-ಬಡಿದಾಟಗಳಿಗಷ್ಟೇ ಸೀಮಿತವಾಗದೆ ಮುಖಾಮುಖಿ ಸಂಘರ್ಷಕ್ಕೆ ಕಾರಣವಾಗಿವೆ. ಕುಟುಂಬಗಳು ಮತ್ತು ಅಪಾರ್ಟ್ ಮೆಂಟ್ ಗಳು ಇಲ್ಲವೇ ವಸತಿಬಡಾವಣೆಗಳ ವಾಟ್ಸ ಪ್ ಗ್ರೂಪಗಳ ಒಳಗೆ ಇಣುಕಿದರೆ ಈ ಸಮಾಜವೇ ಒಂದು ದೊಡ್ಡ ಹುಚ್ಚರ ಆಸ್ಪತ್ರೆ ಎಂದು ಅನಿಸಿಬಿಡುತ್ತದೆ.

ನಾನು ಪ್ರಜಾವಾಣಿಯಲ್ಲಿದ್ದಷ್ಟು ದಿನ ನನ್ನ ಅಂಕಣ,ವರದಿ,ಬರಹಗಳ ಕಾರಣಕ್ಕಾಗಿ ಜಾತಿ,ಧರ್ಮ, ಪಕ್ಷಗಳ ಭೇದವಿಲ್ಲದೆ ಬಹಳಷ್ಟು ಮಂದಿ ನನ್ನ ಮೇಲೆ ಪ್ರೀತಿ-ಅಭಿಮಾನದ ಮಳೆ ಸುರಿಸುತ್ತಿದ್ದರು. 2002ರ ಗುಜರಾತ್ ಗಲಭೆಯ ಪ್ರತ್ಯಕ್ಷದರ್ಶಿ ವರದಿ ಮಾಡಿದ ಕನ್ನಡ ಪತ್ರಿಕೆಗಳ ಏಕೈಕ ವರದಿಗಾರ ನಾನು. ಆಗಲೂ ನನಗೆ ಯಾರೂ ದೂಷಣೆ, ನಿಂದನೆ ಮಾಡಿಲ್ಲ, ದ್ವೇಷದ ಪತ್ರ ಬರೆದಿರಲಿಲ್ಲ, ಬೆದರಿಸಿರಲಿಲ್ಲ. ಈ ಸ್ವಘೋಷಿತ ಸಜ್ಜನ ಶಾಸಕ ಸುರೇಶ್ ಕುಮಾರ್ ನಿಮ್ಮ ಪ್ರವೇಶದ ವರೆಗೂ ನನ್ನ ಅಂಕಣಗಳ ಅಭಿಮಾನಿಯಾಗಿದ್ದರು.

ಆದರೆ ಕಳೆದ 11-12 ವರ್ಷಗಳಲ್ಲಿ ಎಲ್ಲವೂ ಬದಲಾಗಿ ಹೋಗಿದೆ.

ಇತ್ತೀಚೆಗೆ ಪರಿಚಯವಿಲ್ಲದ ಡಾಕ್ಟರ್ ಗಳ ಹತ್ತಿರ ಹೋಗಲೂ ಭಯವಾಗುತ್ತಿದೆ. ತಿಂಗಳುಗಳ ಹಿಂದೆ ಗಂಟಲು ನೋವಿಗಾಗಿ ಒಬ್ಬ ಡಾಕ್ಟರ್ ಹತ್ತಿರ ಹೋಗಿದ್ದೆ. ನನ್ನನ್ನು ನೋಡಿದ ಕೂಡಲೇ ಗುರುತು ಹಿಡಿದು ಒಂದೇ ಸಮನೆ ಮೋದಿಯವರನ್ನು ಹೊಗಳಲು ಶುರುಮಾಡಿದ, ನಂತರ ಸಿದ್ದರಾಮಯ್ಯನವರ ಬಗ್ಗೆ ವ್ಯಂಗ್ಯದ ಬಾಣ ಬಿಡತೊಡಗಿದ. ನಾನು ಎದ್ದು ಬಂದೆ. ಯಾವ ನಂಬಿಕೆ ಮೇಲೆ ಇವರಿಂದ ಚಿಕಿತ್ಸೆ ಪಡೆಯಲು ಸಾಧ್ಯ? ಅಪರಿಚಿತರ ಜೊತೆ ವ್ಯವಹರಿಸಲು ಹೋದಾಗೆಲ್ಲ ಇಂತಹ ಅಳುಕು ಕಾಡುತ್ತದೆ.

ನೀವೇನೂ ಅಜರಾಮರ ಅಲ್ಲ, ಮುಂದೊಂದು ದಿನ ಚುನಾವಣೆಯಲ್ಲಿ ಸೋಲಬಹುದು. ಆದರೆ ನಿಮ್ಮಿಂದಾಗಿ ಮನುಷ್ಯ ಸಂಬಂಧಗಳ ನಡುವೆ ಸೃಷ್ಟಿಯಾಗಿರುವ ಕಂದರ ಅಷ್ಟು ಸುಲಭದಲ್ಲಿ ಮುಚ್ಚಿಹೋದೀತೇ? ಮನುಷ್ಯ ಸಂಬಂಧದ ಎಳೆಗಳು ಬಹಳ ಸೂಕ್ಷ್ಮ, ತುಂಡಾದ ಎಳೆಗಳನ್ನು ಜೋಡಿಸಿದರೂ ನಡುವೆ ಗಂಟು ಉಳಿದುಬಿಡುತ್ತದೆ. ನೀವು ಅಂತಹದ್ದೊಂದು ಅಳಿಸಲಾಗದ ಗಂಟು ಎಂದು ಇತಿಹಾಸದ ಪುಟದಲ್ಲಿ ದಾಖಲಾಗುತ್ತೀರಿ ಅಷ್ಟೆ.

ಮತ್ತೊಮ್ಮೆ ಹುಟ್ಟುಹಬ್ಬದ ವಿಳಂಬಿತ ಶುಭಾಶಯಗಳು.



**ದಿನೇಶ್ ಅಮೀನ್ ಮಟ್ಟ್**
ಹಿರಿಯ ಪತ್ರಕರ್ತರು

ಕನ್ನಡದ ಮೇರು ನಟ ಸಾಹಸಸಿಂಹ ಡಾ.ವಿಷ್ಣುವರ್ಧನ್ : ದಿನೇಶ ಶೆಟ್ಟಿ

## ಅಭಿಮಾನಿ ಬಳಗದಿಂದ ಅನ್ನಸಂತರ್ಪಣೆ, ರಕ್ತದಾನ ಶಿಬಿರ ಆಯೋಜನೆ



**ದಾವಣಗೆರೆ:** ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಅಭಿಮಾನಿ ಬಳಗದಿಂದ ಗುರುವಾರ ಇಲ್ಲಿನ ವಿನೋಬನಗರದ 2ನೇ ಮುಖ್ಯ ರಸ್ತೆಯ ಶ್ರೀರಾಮಕೃಷ್ಣ ಆಶ್ರಮದ ಬಳಿ ಇರುವ ಡಾ.ವಿಷ್ಣುವರ್ಧನ್ ಪುತ್ಥಳಿ ಬಳಿ ಡಾ.ವಿಷ್ಣುವರ್ಧನ್ ಅವರ 75ನೇ ವರ್ಷದ ಜನ್ಮದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ ಕೆ.ಶೆಟ್ಟಿ ಸಾಹಸ ಸಿಂಹ ವಿಷ್ಣುವರ್ಧನ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಅನ್ನ ಸಂತರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಮ್ಮ ಕನ್ನಡ ನಾಡಿನ ಮೇರು ನಟರ ಪೈಕಿ ವಿಷ್ಣುವರ್ಧನ್ ಕೂಡ ಒಬ್ಬರು. ಅವರ ಚಿತ್ರಗಳು ಕುಟುಂಬ ಸಮೇತ ನೋಡುವಂತಹವಾಗಿದ್ದವು. ಅಂತಹ ನಟ ಇಂದು ನಮ್ಮೊಂದಿಗೆ ಇಲ್ಲ. ಅಂತಹ ನಟನ ಜನ್ಮದಿನವನ್ನು ನಾವು ಇಂದು ಸಾರ್ವಜನಿಕರಿಗೆ, ಅಭಿಮಾನಿಗಳಿಗೆ ಅನ್ನ ಸಂತರ್ಪಣೆ ಮಾಡುವ ಮೂಲಕ ಸ್ಮರಣೆ ಮಾಡುತ್ತಿದ್ದೇವೆ. ಅಲ್ಲದೇ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡುತ್ತಿರುವುದು ನಮ್ಮ ಕನ್ನಡ ನಾಡಿಗೆ ಹೆಮ್ಮೆಯೆನಿಸಿದೆ. ಜೊತೆಗೆ ಅಭಿಮಾನಿಗಳಿಗೆ ಖುಷಿ ತಂದಿದೆ ಎಂದರು.

ಇದೇ ಸಂದರ್ಭದಲ್ಲಿ ಲಯನ್ಸ್ ರಕ್ತನಿಧಿ ಕೇಂದ್ರದಿಂದ ರಕ್ತದಾನ ಶಿಬಿರ ನಡೆಯಿತು. ಅನೇಕ ಅಭಿಮಾನಿಗಳು ರಕ್ತದಾನ ಮಾಡುವ ಮೂಲಕ ಜನ್ಮದಿನದ ಶುಭಾಷಯಗಳನ್ನು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಮಂಜಪ್ಪ, ಪಾಲಿಕೆ ಮಾಜಿ ಸದಸ್ಯ ಎ.ನಾಗರಾಜ, ಅಭಿಮಾನಿ ಬಳಗದ ಸಂಸ್ಥಾಪಕ ಯೂಸುಫ್, ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ, ಸಂಕಲ್ಪ ಫೌಂಡೇಷನ್ ಅಧ್ಯಕ್ಷ ಮಹಾಂತೇಶ, ಸತೀಶ ಶೆಟ್ಟಿ, ಯುವರಾಜ್, ರಾಜು ಗೌಡ, ಮಾರುತಿರಾವ್, ಚಂದ್ರಶೇಖರ, ಸನಾ ಸೈಯದ್, ನಜೀರ್, ಸುವರ್ಣಮ್ಮ, ರೂಪ, ನೀತು ಸೇರಿದಂತೆ ಅನೇಕರು ಭಾಗವಹಿಸಿದ್ದರು

## ಸ್ಮಶಾನ ಭೂಮಿ ಒತ್ತುವರಿ ತೆರವಿಗೆ ಆಗ್ರಹ



**ಚಿಕ್ಕಮಗಳೂರು:** ತಾಲೂಕಿನ ಕಸಬಾ ಹೋಬಳಿ ಬಿಂಡಿಗ ಮಲ್ಲೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಬ್ಬಳ್ಳಿ ಗ್ರಾಮದಲ್ಲಿ ಸ್ಮಶಾನಕ್ಕಾಗಿ ಮೀಸಲಿರುವ ಭೂಮಿಯನ್ನ ಕೆಲವರು ಒತ್ತುವರಿ ಮಾಡಿದ್ದು ಕೂಡಲೇ ಒತ್ತುವರಿಯನ್ನು ತೆರವುಗೊಳಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಆಕ್ರೋಶ ಹೊರಹಾಕಿದರು.

ಸ್ಥಳಕ್ಕೆ ಕಂದಾಯ ಅಧಿಕಾರಿ ಸಂತೋಷ್, ಗ್ರಾಮ ಲೆಕ್ಕಿಗರಾದ ಯಮುನ, ಪಂಚಾಯ್ತಿ ಅಭಿವೃದ್ಧಿ ಅಧಿಕಾರ ಸುಷ್ಮಾ ಅವರು ಭೇಟಿ ನೀಡಿ ಪರಿಶೀಲಿಸಿ, ಸರ್ವೆ ಅಧಿಕಾರಿಗಳ ಮೂಲಕ ಸರ್ವೆ ಕಾರ್ಯ ನಡೆಸಿದರು.

ಗ್ರಾಮಸ್ಥರು ಮಾತನಾಡಿ ಅಧಿಕಾರಿಗಳು ನಡೆಸಿರುವ ಸರ್ವೆ ಕಾರ್ಯ ನಮಗೆ ತೃಪ್ತಿ ನೀಡಿಲ್ಲ, ನಮಗೆ ಅಧಿಕಾರಿಗಳ ಮೇಲೆ ನಂಬಿಕೆ ಇಲ್ಲ, ಮಾನ್ಯ ಜಿಲ್ಲಾಧಿಕಾರಿಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸ್ಮಶಾನಕ್ಕೆ ಹಾಗೂ ರೈತರ ಜಮೀನಿಗೆ ತೆರಳುವ ಒತ್ತುವರಿಯಾಗಿರುವ ರಸ್ತೆಯನ್ನು ತೆರವುಗೊಳಿಸಿಕೊಡಬೇಕು ಎಂದು ಮನವಿ ಮಾಡಿದರು.

ಹೆಬ್ಬಳ್ಳಿ ಗ್ರಾಮದ ನಿವಾಸಿಗಳಾದ ಚಂದ್ರಮ್ಮ ಬಿನ್ ಗಿಡ್ಡಶೆಟ್ಟಿ, ಚಂದ್ರಶೇಖರ ಬಿನ್ ಗಿಡ್ಡಶೆಟ್ಟಿ, ಕುಲಶೇಖರ ಬಿನ್ ಗಿಡ್ಡಶೆಟ್ಟಿ, ಅಶೋಕ ಬಿನ್ ಗಿಡ್ಡಶೆಟ್ಟಿ, ಮೂರ್ತಿ ಬಿನ್ ಸಿದ್ದಶೆಟ್ಟಿ ಇವರು ಸ್ಮಶಾನದ ಜಾಗ, ಹಾಗೂ ಸ್ಮಶಾನಕ್ಕೆ ತೆರಳುವ ಹಾಗೂ ರೈತರು ತಮ್ಮ ಜಮೀನುಗಳಿಗೆ ತೆರಳುವ ರಸ್ತೆಯನ್ನು ಒತ್ತುವರಿ ಮಾಡಿದ್ದಾರೆ, ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು ಸಹ ಯಾವುದೇ ಪ್ರಯೋಜನವಾಗಿಲ್ಲ ಅಧಿಕಾರಿಗಳು ನಿರ್ಲಕ್ಷ ಧೋರಣೆ ತೋರುತ್ತಿದ್ದಾರ ಆರೋಪಿಸಿದರು.

ಊರಿನಲ್ಲಿ ಯಾರಾದರೂ ಮರಣ ಹೊಂದಿದರೆ ಸ್ಮಶಾನಕ್ಕೆ ಕೊಂಡೊಯ್ಯಲು ರಸ್ತೆ ಇಲ್ಲ, ಇದ್ದ ರಸ್ತೆಯನ್ನು ಒತ್ತುವರಿ ಮಾಡಿದರೆ ಹೇಗೆ ಸ್ಮಶಾನಕ್ಕೆ ತೆರಳುವುದು ಎಂದು ಆಕ್ರೋಶ ಹೊರಹಾಕಿದರು.

ನಿಮ್ಮ ಜಮೀನುಗಳಿಗೆ ಹೋಗಬೇಕೆಂದರೆ ನಮ್ಮ ಜಮೀನಿನ ಒಳಗೆ ಇರುವ ರಸ್ತೆಯಲ್ಲೇ ತಿರುಗಾಡಿ ಎಂದು ಹೇಳುತ್ತಾರೆ ಆದರೆ ಈ ರಸ್ತೆಯಲ್ಲಿ ತಿರುಗಾಡುವಾಗ ಹಲ್ಲೇ ಮಾಡುತ್ತಾರೆ, ನಮಗೆ ಜೀವ ಭಯ ಇದೆ, ಆದ್ದರಿಂದ ಒತ್ತುವರಿಯಾಗಿರುವ ರಸ್ತೆ ಹಾಗೂ ಜಾಗವನ್ನ ತೆರವುಗೊಳಿಸಿ ನಮ್ಮ ಜಮೀನುಗಳಿಗೆ ತಿರುಗಾಡಲು ರಸ್ತೆ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

## ಕ್ಷೌರಿಕರ ಜಾತಿ ಸಮೀಕ್ಷೆ; ಸವಿತಾ ಸಮಾಜ ಎಂದೇ ನಮೂದಿಸಿ' ಕೃಷ್ಣಾ ಹಡಪದ ಕರೆ

**ಗದಗ :** ಸವಿತಾ ಸಮಾಜಕ್ಕೆ ಸಂಬಂದಿಸಿದ 26 ಉಪಪಂಗಡದ ಕ್ಷೌರಿಕರು ವಿವಿಧ ಜಾತಿ ಸೂಚಕ ಹೆಸರುಗಳನ್ನು ಬಿಟ್ಟು, ಸಮುದಾಯದ ಮೂಲ ಹೆಸರನ್ನೇ ನೇರವಾಗಿ ಸವಿತಾ ಸಮಾಜ ಎಂದೇ ನಮೂದಿಸಬೇಕೆಂದು ಗದಗ ಜಿಲ್ಲಾ ಸವಿತಾ ಸಮಾಜದ ಜಿಲ್ಲಾಧ್ಯಕ್ಷರಾದ ಕೃಷ್ಣಾ ಎಚ್ ಹಡಪದ ಸವಿತಾ ಸಮಾಜದ ಕ್ಷೌರಿಕ ಬಾಂಧವರಲ್ಲಿ ಮನವಿ ಮಾಡಿ ಕರೆ ನೀಡಿದರು

ಅವರು ಅರಸಿಕೆರೆಯಲ್ಲಿ ಕಡೂರ ರವಿಕುಮಾರ ಮಾಲಿಕತ್ವದ ಗ್ಲಾಮರ್ ಕೇರ್ ಸಂಸ್ಥೆಯಿಂದ ಹಮ್ಮಿಕೊಂಡ ವಿಶ್ವ ಕ್ಷೌರಿಕರ ದಿನ ಆಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಸ್ಥೆ ವತಿಯಿಂದ ಸಲ್ಲಿಸಿದ ಪ್ರೀತಿಯ ಗೌರವ ಸನ್ಮಾನ ಸ್ವಿಕರಿಸಿ ಮಾತನಾಡಿ ರಾಜ್ಯದ ಸಮಸ್ತ ಕ್ಷೌರಿಕರ ಮನೆಗೆ ಬರುವ ಸಮೀಕ್ಷಕರಿಗೆ ಜಾತಿ ಕಾಲಂನಲ್ಲಿ ನಮ್ಮ ಜಾತಿಯನ್ನು 'ಸವಿತಾ ಸಮಾಜ' ಉಪಜಾತಿಯನ್ನು "ಕ್ಷೌರಿಕ" ದರ್ಮ "ಹಿಂದು" ಎಂದು ನಮೂದಿಸಲು ಮುಲಾಜಿಲ್ಲದೆ ತಿಳಿಸಬೇಕು ಇದು ಸವಿತಾ ಸಮಾಜದ ಒಗ್ಗಟ್ಟನ್ನು ತೋರಿಸುವುದಲ್ಲದೆ, ಸಮುದಾಯದ ಸರಿಯಾದ ಪ್ರತಿನಿಧಿಸುವಿಕೆಗೆ ಸಹಕಾರಿಯಾಗುತ್ತದೆ ಎಂದು ಗದಗ ಜಿಲ್ಲಾ ಸವಿತಾ ಸಮಾಜದ ಜಿಲ್ಲಾಧ್ಯಕ್ಷರಾದ ಕೃಷ್ಣಾ ಎಚ್ ಹಡಪದ ಅವರು ಸವಿತಾ ಸಮಾಜದ ಕ್ಷೌರಿಕ ಬಾಂಧವರಲ್ಲಿ ಮನವಿ ಮಾಡಿದರು

ಕರ್ನಾಟಕ ರಾಜ್ಯ ಸವಿತಾ ಸಮಾಜದ ರಾಜ್ಯ ನಿರ್ದೇಶಕರು ಮತ್ತು ಗ್ಲಾಮರ್ ಕೇರ್ ಸಂಸ್ಥೆಯ ಮಾಲೀಕರಾದ ಕಡೂರ ರವಿಕುಮಾರ ಮಾತನಾಡಿ ಗದಗ ಕೃಷ್ಣಾ ಎಚ್ ಹಡಪದ ಅವರು



26 ವರ್ಷಗಳಿಂದ ಸವಿತಾ ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ ಸಂಘಟನೆ ಮಾಡುತ್ತಾ ಸರ್ಕಾರದ ಮಟ್ಟದಲ್ಲಿ ಹಲವಾರು ಬೇಡಿಕೆಗಳನ್ನು ಸಲ್ಲಿಸಿ ಪಟ್ಟು ಹಿಡಿದು ಅದನ್ನು ಸಾಕಾರ ಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ, ನಿರ್ಗತಿಕ ಬಡ ಕ್ಷೌರಿಕರಿಗಾಗಿ ಸರಕಾರದಿಂದ ಕ್ಷೌರಕುಟೀರ ಮಾಡಬೇಕೆಂಬ ಪ್ರಸ್ತಾಪವನ್ನು

ಮುಖ್ಯಮಂತ್ರಿಗಳಿಗೆ ಸಲ್ಲಿಸಿ ಸರ್ಕಾರದ ಗಮನ ಸೆಳೆಯುವಲ್ಲಿ ಬಹು ಮುಖ್ಯ ಪಾತ್ರಗೈದ ಅವರು ಕರ್ನಾಟಕ ರಾಜ್ಯ ಇತಿಹಾಸದಲ್ಲೇ ರಾಜ್ಯದ ಪ್ರಥಮವಾದ ಗದಗನಲ್ಲಿ ಒಂದು ಪ್ರಮುಖ ವೃತ್ತಕ್ಕೆ ಶ್ರೀ ಸವಿತಾ ಮಹರ್ಷಿ ಗುರುಗಳ ನಾಮಕರಣ ಮಾಡಿಸಿದ್ದು ಹೀಗೆ ಸಮಾಜದ ಮುಖ್ಯವಾಗಿ ಸಾವಿರಾರು ಕೆಲಸಗಳನ್ನು ನಿರಂತರವಾಗಿ ಮಾಡುತ್ತಾ ಬಂದಿರುವ ಗದಗ ಕೃಷ್ಣಾ ಎಚ್ ಹಡಪದ ಅವರನ್ನು ವಿಶ್ವ ಕ್ಷೌರಿಕ ದಿನಾಚರಣೆ ಪ್ರಯುಕ್ತ ಗ್ಲಾಮರ್ ಕೇರ್ ಅರಸೀಕೆರೆ ಸಂಸ್ಥೆಯಿಂದ ಗೌರವ ಸನ್ಮಾನ ಸಲ್ಲಿಸಿ ಗೌರವಿಸಿದ್ದು ಹೆಮ್ಮೆ ಅನಿಸುತ್ತದೆ. ಎಂದು ಹೇಳಿದರು

ಈ ಸಂದರ್ಭದಲ್ಲಿ ಗದಗ ಜಿಲ್ಲಾ ಸವಿತಾ ಸಮಾಜದ ಯುವ ನಾಯಕರಾದ ವಿನಾಯಕ ರಾಯಚೂರ. ಬೆಳಗಾವಿನ ಸಮಾಜದ ಯುವ ಮುಖಂಡರಾದ ಪ್ರಮೋದ್ ಚಿಂಚಲಿ, ಗ್ಲಾಮರ್ ಕೇರ್ ನ ವ್ಯವಸ್ಥಾಪಕರಲ್ಲೊಬ್ಬರಾದ ಜೈವಿತ್ ಕೆ ಆರ್, ಸಿಬ್ಬಂದಿಗಳಾದ ವಿನಾಯಕ್ , ಸಂತೋಷ್ ಇತರರು ಇದ್ದರು

## ಅತಿಥಿ ಉಪನ್ಯಾಸಕರು, ಭೋಧನಾ ಸಹಾಯಕರ ತಾತ್ಕಾಲಿಕ ನೇಮಕಾತಿಗೆ ಅರ್ಜಿ ಆಹ್ವಾನ

**ದಾವಣಗೆರೆ :** ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣ ಹಾಗೂ ಚಿತ್ರದುರ್ಗ ಜಿ.ಆರ್. ಹಳ್ಳಿ ಜ್ಞಾನ ಗಂಗೋತ್ರಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಪ್ರಸಕ್ತ ಸಾಲಿನ ಶೈಕ್ಷಣಿಕ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರು, ಭೋಧನಾ ಸಹಾಯಕರುಗಳನ್ನು ತಾತ್ಕಾಲಿಕವಾಗಿ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.ಕಲಾ ನಿಕಾಯ: ಇಂಗ್ಲೀಷ್, ಅರ್ಥಶಾಸ್ತ್ರ , ಉರ್ದು, ಇತಿಹಾಸ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಸಮಾಜ ಶಾಸ್ತ್ರ ವಿಭಾಗನಿರ್ವಹಣ ನಿಕಾಯ: ಎಂ.ಬಿ.ಎ ವಿಭಾಗ, ವಿಜ್ಞಾನ ನಿಕಾಯ: ಜೀವರಸಾಯನಶಾಸ್ತ್ರ, ಅಪರಾಧ ಶಾಸ್ತ್ರ ಮತ್ತು ನ್ಯಾಯ ವಿಜ್ಞಾನ, ಗಣಕ ವಿಜ್ಞಾನ, ಎಂ.ಸಿ.ಎ ಸೂಕ್ಷ್ಮಾಣು ಜೀವಶಾಸ್ತ್ರ, ಯೋಗ ವಿಜ್ಞಾನ, ಮತ್ತು ಪ್ರಾಣಿ ಶಾಸ್ತ್ರ ವಿಭಾಗ. ಶಿಕ್ಷಣ ನಿಕಾಯ: ಶಿಕ್ಷಣ, ದೈಹಿಕ ಶಿಕ್ಷಣ ವಿಭಾಗದಲ್ಲಿನ ಹುದ್ದೆಗಳು. ಅರ್ಜಿ ನಮೂನೆ, ನಿರ್ವಹಣಾ ಶುಲ್ಕ ಹಾಗೂ ಇನ್ನಿತರೆ ವಿವರಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್: www.davangereuniversity.ac.in ನಲ್ಲಿ ಮಾಹಿತಿಯನ್ನು ಪಡೆಯಬಹುದೆಂದು ವಿಶ್ವವಿದ್ಯಾನಿಲಯದ ಕುಲಸಚಿವರು ತಿಳಿಸಿದ್ದಾರೆ.

## ಸಮಿತಿ ಸಭೆ

**ದಾವಣಗೆರೆ :** ವಿವಿಧ ಇಲಾಖೆಗಳಿಂದ ಪ.ಜಾತಿ ಉಪಯೋಜನೆ, ಬುಡಕಟ್ಟು ಉಪಯೋಜನೆಯ ಅಭಿವೃದ್ಧಿ ಕಾರ್ಯಕ್ರಮಗಳ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 20 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಕೆ. ನಾಗರಾಜ ತಿಳಿಸಿದ್ದಾರೆ.

# ಡಾ. ಪುನೀತ್ ರಾಜ್‌ಕುಮಾರ್ ಅವರ ಪುತ್ಥಳಿ ಅನಾವರಣ ಸಮಾರಂಭ

**ಚಿಕ್ಕಮಗಳೂರು:** ನಗರದ ಹೃದಯ ಭಾಗದಲ್ಲಿರುವ ಆಜಾದ್ ಪಾರ್ಕ್ ವೃತ್ತದಲ್ಲಿ ಸೆ. 24 ರಂದು ಕರ್ನಾಟಕ ರತ್ನ, ಪವರ್ ಸ್ಟಾರ್ ಡಾ. ಪುನೀತ್ ರಾಜ್‌ಕುಮಾರ್ ಅವರ ಪುತ್ಥಳಿ ಅನಾವರಣ ಸಮಾರಂಭ ನಡೆಯಲಿದೆ ಎಂದು ವಿಸ್ಟಾರ್ ವೆಲ್ನೆಸ್ ಪ್ರೈ.ಲೀ.ನ ವ್ಯವಸ್ಥಾಪಕ ನಿರ್ದೇಶಕ ಡಾ. ಅಫ್ಸರ್ ಹಿಂದೂಸ್ತಾನಿ ಅವರು ಹೇಳಿದ್ದಾರೆ.

ಅಂದು ಸಂಜೆ 5.30 ಕ್ಕೆ ಆಜಾದ್ ಪಾರ್ಕ್ ವೃತ್ತದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಜಿಲ್ಲಾ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಐ.ಕೆ. ಓಂಕಾರೇಗೌಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ನಿರ್ಮಾಪಕಿ ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಪುತ್ಥಳಿ ಅನಾವರಣ ಮಾಡಲಿದ್ದಾರೆ. ಶಾಸಕ ಎಚ್.ಡಿ. ತಮ್ಮಯ್ಯ ಅವರು ಕನ್ನಡ ಧ್ವಜ ಅರೋಹಣ ಮಾಡಲಿದ್ದು, ಮಾಜಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚಿತ್ರಕಲಾ ಪರಿಷತ್ನ ಅಧ್ಯಕ್ಷ ಡಾ.ಬಿ.ಎಲ್. ಶಂಕರ್ ಅವರು ಅಭಿನಂದನಾ ಭಾಷಣ ಮಾಡಲಿದ್ದಾರೆ. ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ಪುನೀತ್ ರಾಜ್‌ಕುಮಾರ್ ರವರಿಗೆ ನುಡಿ ನಮನ ಸಲ್ಲಿಸಲಿದ್ದಾರೆ. ವಿಧಾನಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಅವರು ಡಾ. ರಾಜ್‌ಕುಮಾರ್ ಅವರ ಭಾವಚಿತ್ರ ಅನಾವರಣಗೊಳಿಸಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ವಿಧಾಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಸಂಸದ ಕೋಟಾ ಶ್ರೀನಿವಾಸ್ ಪೂಜಾರಿ ಹಾಗೂ ಜಿಲ್ಲೆಯ ಶಾಸಕರು, ವಿಧಾನಪರಿಷತ್ ಸದಸ್ಯರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ತಾಲೂಕು ಮಟ್ಟದ ಕ್ರೀಡಾಕೂಟ

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ, ನಗರಸಭೆ ಚಿಕ್ಕಮಗಳೂರು, ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಚಿಕ್ಕಮಗಳೂರಿನ ವಿದ್ಯಾಭಾರತಿ ವಿದ್ಯಾ ಸಂಸ್ಥೆಯ ಆಶ್ರಯದಲ್ಲಿ ಸೆ. 20 ರಂದು ನಗರದ ನೇತಾಜಿ ಸುಭಾಷ್ ಚಂದ್ರ ಬೋಸ್ ಜಿಲ್ಲಾ ಆಟದ ಮೈದಾನದಲ್ಲಿ ಚಿಕ್ಕಮಗಳೂರು ತಾಲೂಕು ಮಟ್ಟದ 17 ವರ್ಷ ವಯೋಮಾನದೊಳಗಿನ ಮಕ್ಕಳ 2025-26 ನೇ ಸಾಲಿನ ಕ್ರೀಡಾಕೂಟ ನಡೆಯಲಿದೆ ಎಂದು ಅಫ್ಸರ್ ಅವರು ಹೇಳಿದರು.

ಅಂದು ಬೆಳಿಗ್ಗೆ 8.30 ಕ್ಕೆ ಆರಂಭವಾಗಲಿರುವ ಕ್ರೀಡಾಕೂಟವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ಅವರು ಉದ್ಘಾಟಿಸಲಿದ್ದಾರೆ. ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಮಧು ಬಂಗಾರಪ್ಪ, ವಿಧಾಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಶಾಸಕ ಟಿ.ಡಿ. ರಾಜೇಗೌಡ, ವಿಧಾನಪರಿಷತ್ ಸದಸ್ಯರಾದ ಡಾ. ಅರತಿ ಕೃಷ್ಣ, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್ ಉಪಸ್ಥಿತಿ ಇರಲಿದ್ದು, ಶಾಸಕ ಎಚ್.ಡಿ. ತಮ್ಮಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾಧಿಕಾರಿ ಮೀನಾ ನಾಗರಾಜ್, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಚ್. ಎಸ್. ಕೀರ್ತನಾ, ಜಿಲ್ಲಾ ರಕ್ಷಣಾಧಿಕಾರಿ ಡಾ. ವಿಕ್ರಂ ಅಮಟೆ ಅವರು ಉಪಸ್ಥಿತಿ ಇರಲಿದ್ದಾರೆ ಎಂದರು.

ವಿದ್ಯಾಸಂಸ್ಥೆಗೆ ಅಭಿನಂದನಾ ಪತ್ರ

ಚಿಕ್ಕಮಗಳೂರು ನಗರದ ಗೌರಿ ಕಾಲುವೆಯಲ್ಲಿ 2002 ರಲ್ಲಿ ಸ್ಥಾಪನೆಗೊಂಡ ವಿದ್ಯಾಭಾರತಿ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಲಾಗುತ್ತಿದ್ದು, ವಿದ್ಯಾಭಾರತಿ ಆಂಗ್ಲ ಮಾಧ್ಯಮ ಶಾಲೆ ಸತತವಾಗಿ ಮೂರು ವರ್ಷಗಳ ಕಾಲ ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 100 ರಷ್ಟು ಫಲಿತಾಂಶ ಪಡೆದುಕೊಂಡಿದೆ. ಈ ಕಾರಣಕ್ಕಾಗಿ ಶಿಕ್ಷಣ ಇಲಾಖೆ ಸೆ. 8 ರಂದು ನಡೆದ ಸಮಾರಂಭದಲ್ಲಿ ಅಭಿನಂದನಾ ಪತ್ರ ನೀಡಿ ಪ್ರಶಂಸಿದೆ ಎಂದು ಹೇಳಿದರು.

ಪ್ರಶಸ್ತಿ ಪ್ರದಾನ

ತಮ್ಮ ಮಾಲೀಕತ್ವದ ವಿಸ್ಟಾರ್ ವೆಲ್ನೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ 2019 ರಲ್ಲಿ ಸ್ಥಾಪನೆ ಮಾಡಲಾಗಿದ್ದು, ವ್ಯಾಪಾರ ವಲಯದಲ್ಲಿ ಉತ್ತಮ ಸಾಧನೆ ಮಾಡಿದೆ. ಈ ಕಾರಣಕ್ಕಾಗಿ ಏಷ್ಯಾಟುಡೇ ಸಂಸ್ಥೆ ಸೆ. 25 ರಂದು ಲಂಡನ್‌ನ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ನಡೆಯಲಿರುವ ಗ್ಲೋಬಲ್ ಲೀಡರ್ಸ್ ಶೃಂಗ- 2005 ರ ಸಮಾರಂಭದಲ್ಲಿ ವೆಲ್ನೆಸ್ ಉತ್ಪನ್ನಗಳ ಪ್ರಮುಖ ತಯಾರಕರು ಪ್ರಶಸ್ತಿ ನೀಡಿ ಗೌರವಿಸಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿದ್ಯಾಭಾರತಿ ಆಂಗ್ಲ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಸಾಹಿರಾ ಫಾತಿಮಾ, ವಿಸ್ಟಾರ್ ವೆಲ್ನೆಸ್ ಪ್ರೈ.ಲೀ.ನ ಪ್ರಧಾನ ವ್ಯವಸ್ಥಾಪಕ ಎಂ.ಆರ್. ಸೋಮಶೇಖರ್, ಹಣಕಾಸು ವಿಭಾಗದ ಮುಖ್ಯಸ್ಥ ಸಿ.ಆರ್. ಮಂಜುನಾಥ್ ಉಪಸ್ಥಿತರಿದ್ದರು.



# ಸಂವಿಧಾನ ಬದಲಾಯಿಸುವ ಹುನ್ನಾರ ತಡೆಯಲು ಹೋರಾಡೋಣ: ಡಿ ತಿಪ್ಪಣ್ಣ

**ಮಾಯಕೊಂಡ:** ಸಮಾನತೆ ಪ್ರತಿಪಾದಿಸುವ ಸಂವಿಧಾನ ಬದಲಾಯಿಸಿ, ಮನುಸ್ಮೃತಿ ಹೇರುವ ಹುನ್ನಾರ ವಿಫಲಗೊಳಿಸದಿದ್ದರೆ ದೇಶದ ಶೂದ್ರರ ಸಾಮಾಜಿಕ ಸ್ಥಿತಿ ಗಂಭೀರವಾಗಲಿದೆ, ಎಂದು ಸಂವಿಧಾನ ರಕ್ಷಣಾ ಪಡೆಯ ಸಂಚಾಲಕ ಡಿ.ತಿಪ್ಪಣ್ಣ ಕತ್ತಲಗೆರೆ ಎಚ್ಚರಿಸಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಭಾನುವಾರ ಸಂವಿಧಾನ ರಕ್ಷಣಾ ಪಡೆಯ ಜಾಗೃತಿ ಸಭೆಯಲ್ಲಿ ಅವರು ಮಾತನಾಡಿದರು.

'ಸಂವಿಧಾನದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್, ದೇಶದ ಪ್ರತಿ ನಾಗರೀಕನಿಗೂ ರಾಜಕೀಯ, ಸಾಮಾಜಿಕ ಹಕ್ಕು ಮತ್ತು ಕರ್ತವ್ಯ ನೀಡಿದ್ದಾರೆ. ಸರ್ವರೂ ಸ್ವಾಭಿಮಾನ ಮತ್ತು ಸಮಾನತೆಯಿಂದ ಬದುಕುತ್ತಿದ್ದಾರೆ, ಎಂದು ವಿಶ್ಲೇಷಿಸಿದರು.

ವಈಚೆಗೆ ಸಂಸದರೊಬ್ಬರು ನಾವು ಗೆದ್ದು ಬಂದಿರುವುದೇ ಸಂವಿಧಾನ ಬದಲಾವಣೆಗೆ

ಎಂದಾಗ ವ್ಯಾಪಕ ವಿರೋಧ ವ್ಯಕ್ತವಾಯಿತು. ಈಚೆಗೆ ಕುಂಭಮೇಳದಲ್ಲಿ ಮನುವಾದಿಗಳು 556 ಪುಟದ ಮನುಸ್ಮೃತಿ ಬಿಂಬಿಸುವ ಸಂವಿಧಾನ ರಚಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಅಂಬೇಡ್ಕರ್ ಸಂವಿಧಾನ ಕೈಬಿಟ್ಟು, ಮನು ವಾದ ಸಂವಿಧಾನವನ್ನು ಅಳವಡಿಸುವ ಹೋರಾಟ ಒಳಗೊಳಗೇ ನಡೆಯುತ್ತಿದೆ. ದಲಿತರಿಗೆ, ಮಹಿಳೆಯರಿಗೆ ಶಿಕ್ಷಣ, ಸಮಾನತೆ ತಿರಸ್ಕರಿಸಿದ ಮನುಸ್ಮೃತಿಯನ್ನು ಅಂಬೇಡ್ಕರ್ ಸುಟ್ಟು ಹಾಕಿದ್ದರು. ಶೂದ್ರ ಸಮುದಾಯಗಳು ಒಂದಾಗಿ ಹೀಗಿರುವ ಅಂಬೇಡ್ಕರ್ ಸಂವಿಧಾನವನ್ನು ಉಳಿಸಿಕೊಳ್ಳಬೇಕು. ಎಲ್ಲರೂ ಒಂದಾಗಿ ಸಂವಿಧಾನ ರಕ್ಷಣೆಗೆ ಕೈಜೋಡಿಸಬೇಕು, ಎಂದು ಕರೆನೀಡಿದರು.

ಸಂವಿಧಾನ ರಕ್ಷಣಾ ಪಡೆಯ ಮುಖ್ಯಸ್ಥ ಮುರುಡಪ್ಪ, ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಎಲ್ಲಾ ವರ್ಗದ ಜಾತಿ ಜನಾಂಗಗಳಿಗೆ ಪ್ರಾಧಾನ್ಯತೆ ನೀಡಿದ್ದಾರೆ.

ದೇಶದ ಸುಭದ್ರತೆಗೆ ಕಾನೂನು, ಆಡಳಿತ, ನೀತಿ ನಿಯಮರೂಪಿಸಿ ಯಶಸ್ವಿ ಸಂವಿಧಾನ ನೀಡಿದ್ದಾರೆ.

ಇಂದು ಹಿಂದುಗಳ ವಿರುದ್ಧದ ಮುಸ್ಲಿಮರನ್ನು ಎತ್ತಿಕಟ್ಟುವ ಕೆಲಸ ನಡೆದು, ನಿತ್ಯವೂ ಅಶಾಂತಿ, ಗೊಂದಲ ಉಂಟಾಗಿದೆ. ಬುದ್ಧ, ಬಸವಣ್ಣ ಜನಿಸಿದ ನಾಡಿನಲ್ಲಿ ಸಂಘರ್ಷಕ್ಕೆ ಅವಕಾಶ ಕೊಡಬಾರದು. ಕೋಮು ಸೌಹರ್ದ, ಸಹಬಾಳ್ವೆ ಭಾರತೀಯರ ಉಸಿರಾಗಬೇಕು.ಎಲ್ಲರಿಗೂ ಮೀಸಲಾತಿ, ಸಮಾನತೆ, ಹಕ್ತಜು ನೀಡಿದ ಸಂವಿಧಾನ ಬದಲಾವಣೆಗೆ ಅವಕಾಶ ನೀಡದೇ ಉಳಿಸಲು ಪಣ ತೊಡಬೇಕು. ಇದು ಬದುಕಿರುವ ನಮ್ಮಪೀಳಿಗೆಗೆ ಅಲ್ಲ ಮುಂದಿನ ಪೀಳಿಗೆ ಉಳಿವಿಗೂ ಸಂವಿಧಾನ ಅವಶ್ಯಕ, ಎಂದರು.

ಸಂವಿಧಾನ ರಕ್ಷಣಾ ಪಡೆಯ ಸಂಚಾಲಕ, ವಕೀಲ ಅನೀಸ್ ಪಾಷಾ ಮಾತನಾಡಿ. ಇತ್ತೀಚಿನ ದಿನಗಳಲ್ಲಿ ಮನುಷ್ಯರಲ್ಲಿ ಪ್ರೀತಿ, ವಿಶ್ವಾಸ, ಭಾವನಾತ್ಮಕ ಸಂಬಂಧಗಳು ಕ್ಷೀಣಿಸಿವೆ. ಆಳುತ್ತಿರುವ ನಾಯಕರು ನಾವೇ ರಾಜರೆಂದು ತಿಳಿದುಕೊಂಡಿದ್ದು, ಸುಭದ್ರ ಆಡಳಿತ, ಸುರಕ್ಷತೆ ನೀಡಲು ವಿಫಲರಾಗಿದ್ದಾರೆ,

ದೇಶದಲ್ಲಿ ಯಾವುದೇ ಸರ್ಕಾರಿ ಉದ್ಯೋಗ ತುಂಬದೇ ವಿದ್ಯಾವಂತರನ್ನು ನಿರುದ್ಯೋಗಿಗಳನ್ನಾಗಿಸಿದೆ. ಮೀಸಲಾತಿ ಬಗ್ಗೆ ಚರ್ಚೆ ನಡೆಯುತ್ತಿರುವಾಲೇ ಖಾಸಗೀಕರಣ ನಡೆಯುತ್ತಿದ್ದು, ಮೀಸಲಾತಿಯಿಂದ ವಂಚಿಸುವ

ಹುನ್ನಾರ ನಡೆದಿದೆ. ಕೇಂದ್ರ ಸರ್ಕಾರ ರೈಲ್ವೆ, ವಿಮಾನ, ಎಸಿ ವಿಮಾ ಸಂಸ್ಥೆ, ಬಿಎಸ್ ಎಲ್ ನಂಥ ಸಂಸ್ಥೆಗಳನ್ನು ಖಾಸಗೀಕರಣಗೊಳಿಸಿ ಅನ್ಯಾಯ ಮಾಡಿದೆ, ಎಂದರು.

ನೂತನ ಸಂಸತ್ ಭವನ ಉದ್ಘಾಟನೆಯ ವೇಳೆ ಸಂವಿಧಾನದಕ್ಕೆ ಗೌರವ ಸಲ್ಲಿಸಿದೇ, ಒಂದು ಧರ್ಮ ಪ್ರತಿನಿಧಿಸುವ ಪೂಜೆ ಪುನಸ್ಕಾರ ಮಾಡಿದ್ದು, ಸಂವಿಧಾನಕ್ಕೆ ಮಾಡಿದ ಅಪಮಾನ ಎಂದರು.

ಸಭೆಯಲ್ಲಿ ನಿವೃತ್ತ ಉಪ ನೊಂದಣಾಧಿಕಾರಿ ಜಿ ಮಲ್ಲಿಕಾರ್ಜುನಪ್ಪ, ಹಿಂಡಸಕಟ್ಟೆ ಹನುಮಂತಪ್ಪ, ಮಳಲಕೆರೆ ಕೃಷ್ಣಮೂರ್ತಿ, ಅಣ್ಣಾಪುರ ಪರಶುರಾಮ್ ಮಾತನಾಡಿದರು. ಪತ್ರಕರ್ತ ಜಿ ಜಗದೀಶ್ ಸ್ವಾಗತಿಸಿದರು. ಬಾಡಾ ಗ್ರಾ. ಪಂ. ಮಾಜಿ ಅಧ್ಯಕ್ಷ ರುದ್ರಸ್ವಾಮಿ ವಂದಿಸಿದರು.

ಮಾಯಕೊಂಡ ಕೃಷಿ ಪತ್ತಿನ ಸಂಘದ ಅಧ್ಯಕ್ಷ ಜಿ ಬಿ, ಮಲ್ಲೇಶ್, ಗ್ರಾಪಂ ಸದಸ್ಯರಾದ ಮಲ್ಲಪ್ಪ, ವೆಡ್ಡಿಂಗ್ ಹನುಮಂತಪ್ಪ, ಅಣಬೇರು ಜಿ ಎಂ ಅನಿಲ್ ಕುಮಾರ್, ಆನಗೋಡು ನಸ್ರು,

ಮುಖಂಡರಾದ ಜಾಪರ್ ಷರೀಫ್, ರಾಮಗೊಂಡನಹಳ್ಳಿ ನಾಗರಾಜ್, ಬಾಡ ಗ್ರಾ. ಪಂ ಮಾಜಿ ಅಧ್ಯಕ್ಷ ಎಂ ಡಿ ಸುರೇಶ್, ಡಾಬಾ ಮಾಲಿಕ ನಿಂಗರಾಜ್, ಬಸವರಾಜಪ್ಪ, ನಿವೃತ್ತ ಮುಖ್ಯಶಿಕ್ಷಕ ಸಿ ಹನುಮಂತಪ್ಪ, ಹೆದ್ನೇ ನಿಂಗರಾಜ್, ಡಿ.ಎಸ್ ಎಸ್ ಮುಖಂಡ ಲಕ್ಷ್ಮಣ ಸಿದ್ದನೂರು ಬಸವರಾಜ್ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು.



# ಕಲಾ ಮಳಾವ್ ಕಾರ್ಯಕ್ರಮಕ್ಕೆ ಬಂಜಾರ ಕಲಾವಿದರಿಂದ ಅರ್ಜಿ ಆಹ್ವಾನ

**ಹಾಸನ :** ಕರ್ನಾಟಕ ತಾಂಡ ಅಭಿವೃದ್ಧಿ ನಿಗಮವು 2025-26 ನೇ ಸಾಲಿನಲ್ಲಿ ಬಂಜಾರ ಬಹುಮುಖಿ ಕಲಾ ಪ್ರತಿಭಾವನ್ವೇಷನೆ - ಕಲಾ ಮಳಾವ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಲಾಪ್ರದರ್ಶನ ನೀಡಲು ಅರ್ಹ ಬಂಜಾರ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ, ತುಮಕೂರು ವಲಯ ಕಛೇರಿ, ಸರಸ್ವತಿಪುರಂ, 2ನೇ ಹಂತ, ತುಮಕೂರು- 572 102. ದೂರವಾಣಿ ಸಂಖ್ಯೆ :0816-2956063, ಇ-ಮೇಲ್:ಣಣಟಇಣಡಿಇಣಜಭಿಟ@ರಟಚಿಟ.ಛಿಂಟ, ಸಂಪರ್ಕಿಸಲು ತಮಕೂರು ವಲಯ ಕಚೇರಿಯ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಅಭಿವೃದ್ಧಿ ಅಧಿಕಾರಿಗಳು ತಿಳಿಸಿದ್ದಾರೆ.

# ಇಂದು ಜನಸ್ಪಂದನ

**ಹಾಸನ :** ಜಿಲ್ಲೆಯ ಎಲ್ಲಾ ರೈತಾಪಿ ವರ್ಗದವರಿಗೆ, ಸಾರ್ವಜನಿಕರಿಗೆ ಹಾಗೂ ಗ್ರಾಮೀಣ ಜನತೆಗೆ ಸಾಮಾಜಿಕ, ಶೈಕ್ಷಣಿಕ, ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳಿಗೆ ವಿವಿಧ ಇಲಾಖೆಗಳಲ್ಲಿ ದೊರೆಯಬೇಕಾದ ಸೌಲಭ್ಯಗಳು ನಿಗಧಿತ ಅವಧಿಯೊಳಗೆ

ದೊರೆಯದೆ ಇದ್ದಾಗ ರೈತರು ತಮ್ಮ ಅಹವಾಲನ್ನು ದಾಖಲಿಸಲು ಸರ್ಕಾರವು ಏಕೀಕೃತ ಸಾರ್ವಜನಿಕ ದೂರು ನಿವಾರಣಾ ತಂತ್ರಾಂಶ (Integrated Public Grievance Redressal System) ಸಾರ್ವಜನಿಕರು ನೇರವಾಗಿ ತಮ್ಮ ಅಹವಾಲುಗಳನ್ನು ದಾಖಲಿಸಲು ಜಿಲ್ಲಾ ಮಟ್ಟದಲ್ಲಿ ಸೆ.20 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಜನಸ್ಪಂದನಾ ಕಾರ್ಯಕ್ರವನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದೆ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಅವರು ತಿಳಿಸಿದ್ದಾರೆ.

# ರಂಗ ದಸರಾ -2025 ರಡಿಯಲ್ಲಿ ಕುಟುಂಬ ರಂಗ ಕಾರ್ಯಕ್ರಮ

**ಶಿವಮೊಗ್ಗ:** ಶಿವಮೊಗ್ಗ ಮಹಾನಗರ ಪಾಲಿಕೆಯು ರಂಗದಸರಾ -2025 ರಡಿಯಲ್ಲಿ ಕುಟುಂಬ ರಂಗ ಎಂಬ ಕಾರ್ಯಕ್ರಮವನ್ನು ಆಯೋಜಿಸಿದೆ.

ಪಾಲಿಕೆ ವ್ಯಾಪ್ತಿಯ ಕುಟುಂಬದ ಸದಸ್ಯರು ಅಥವಾ ಅಕ್ಕಪಕ್ಕದ ಮನೆಯವರು ಕನಿಷ್ಠ 5 ರಿಂದ 12 ಜನ ಸೇರಿ ಅರ್ಧ ಗಂಟೆಯ ಕಿರು ನಾಟಕವನ್ನು ತಮ್ಮ ಮನೆಯಲ್ಲೇ ಅಥವಾ ಹತ್ತಿರದ ಅನುಕೂಲಕರ ಸ್ಥಳದಲ್ಲಿ ಅಭಿನಯಿಸಬೇಕು

. ಇದರಲ್ಲಿ ಮೆಚ್ಚುಗೆ ಪಡೆದ ನಾಲ್ಕು ತಂಡಗಳನ್ನು ಆಯ್ಕೆ ಮಾಡಿ ನಗರದ ಕುವೆಂಪು ರಂಗಮಂದಿರದಲ್ಲಿ ಸೆ. 30 ರಂದು ಪ್ರದರ್ಶಿಸಲಾಗುವುದು. ನಾಟಕದ ವಿಷಯ ವಿವಾದಾತ್ಮಕ ಹಾಗೂ ಸಮಾಜದ ಶಾಂತಿಗೆ ಭಂಗ ತರುವ ವಿಚಾರವಾಗಿರಬಾರದು.

ಆಸಕ್ತರು ಸೆ. 22 ರೊಳಗಾಗಿ ಸದಸ್ಯ ಕಾರ್ಯದರ್ಶಿಗಳು, ರಂಗ ದಸರಾ ಸಮಿತಿ, ಮಹಾನಗರಪಾಲಿಕೆ, ಶಿವಮೊಗ್ಗ ಇವರ ಕಚೇರಿಯಲ್ಲಿ ಹೆಸರು ಅಥವಾ ತಂಡದ ಹೆಸರನ್ನು ನೋಂದಾಯಿಸಿಕೊಳ್ಳುವುದು.

ನೊಂದಣಿ ಮಾಡಿದ ಮೊದಲ 15 ಸಾರ್ವಜನಿಕ ಕುಟುಂಬಗಳಿಗೆ ಪ್ರೋತ್ಸಾಹಧನವಾಗಿ ರೂ. 1000/-ಗಳಂತೆ ರಂಗ ದಸರಾ ಸಮಿತಿಯಿಂದ ಕಾರ್ಯಕ್ರಮ ಮುಗಿದ ನಂತರ ನೀಡಲಾಗುವುದು ಎಂದು ರಂಗ ದಸರಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಹಾಗೂ ಹೆಸರು ನೋಂದಾಯಿಸಲು ಸಮಿತಿ ಅಧಿಕಾರಿ ಸದಸ್ಯೆ ಮಂಜುಶ್ರೀ-6364083666, ಸಂಚಾಲಕರು ಶ್ರೀಕಂಠ-8660756404, ಸುರೇಶ್ ಎಸ್.ಹೆಚ್.-9449925746 ಇವರುಗಳನ್ನು ಸಂಪರ್ಕಿಸುವುದು.

# 2025- 26 ರ ಸಾಲಿನ ಈಜು ಕ್ರೀಡಾಕೂಟ ಉದ್ಘಾಟನೆ

**ಶಿವಮೊಗ್ಗ:** ಶಿವಮೊಗ್ಗ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಶ್ರೀ ರಾಮಕೃಷ್ಣ ವಿದ್ಯಾನಿಕೇತನ, ಗೋಪಾಳ ಇದರ ಸಂಯುಕ್ತಾಶ್ರಯದಲ್ಲಿ ಇಂದು ಆರಂಭಗೊಂಡ 2025 - 26ರ ಸಾಲಿನ 14 ರಿಂದ 17 ವಯೋಮಿತಿಯ ಬಾಲಕ, ಬಾಲಕಿಯರ ಈಜು ಕ್ರೀಡಾಕೂಟವನ್ನು ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಅವರು ಉದ್ಘಾಟಿಸಿದರು.

ಅವರು ಮಾತನಾಡುತ್ತಾ ಪ್ರತಿ ಮಗುವಿನ ಸದೃಢವಾದ ಶರೀರದಲ್ಲಿ ಸದೃಢವಾದ ಮನಸ್ಸು ಬೆಳೆಯಲು ಕ್ರೀಡೆ ಸಹಕಾರಿ ಈಜು ಸೇರಿದಂತೆ ಇತರ ಕ್ರೀಡೆಗಳು ಹಾಗೂ ವ್ಯಾಯಾಮ ಮಕ್ಕಳಲ್ಲಿ ಮಾನಸಿಕ ಪ್ರೌಢತೆಯನ್ನು ಬೆಳೆಸುತ್ತದೆ ಎಂದರು.



ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಪ್ರಕಾಶ್, ಗಿಡ ಮತ್ತು ಯುವಜನ ಸಬಲೀಕರಣ ಇಲಾಖೆಯ ಉಪನಿಷಕ ರೇಖ್ಯಾನಾಯ್ಕ್ ಅವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಮಕೃಷ್ಣ ವಿದ್ಯಾನಿಕೇತನದ ಅಧ್ಯಕ್ಷ ಡಾ. ಡಿ. ಆರ್. ನಾಗೇಶ್ ವಹಿಸಿದ್ದು, ಕಾರ್ಯದರ್ಶಿ ಶೋಭಾ ವೆಂಕಟರಮಣ, ಟಿ.ಪಿ. ಚಂದ್ರಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

ಕುಮಾರಿ ಕವನ ಪ್ರಾರ್ಥಿಸಿದ ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕ ತೀರ್ಥೇಶ್ ಸ್ವಾಗತಿಸಿದರು. ಹಿರಿಯ ಶಿಕ್ಷಕ ಟಿ.ವಿ. ಗಜೇಂದ್ರನಾಥ್ ವಂದಿಸಿದರು.

ಗೋಪಾಳದ ರಾಮಕೃಷ್ಣ ವಿದ್ಯಾ ನಿಕೇತನದ ಪಕ್ಕದಲ್ಲಿರುವ ಕ್ರೀಡಾ ಸಂಕೀರ್ಣದ ಈಜು ಕೊಳದಲ್ಲಿ ಈ ಸ್ಪರ್ಧೆ ನಡೆಯುತ್ತಿದೆ.

# ಗರ್ಭಿಣಿ, ಬಾಣಂತಿಯರು ಪೌಷ್ಠಿಕ ಆಹಾರ ಸೇವಿಸಲು ಸಲಹೆ

**ಹಾಸನ :** ಗರ್ಭಿಣಿ, ಬಾಣಂತಿ, ಹದಿಹರೆಯದ ಹೆಣ್ಣು ಮಕ್ಕಳು ಪ್ರತಿ ನಿತ್ಯ ಪೌಷ್ಠಿಕ ಆಹಾರಗಳನ್ನು ಸೇವಿಸಬೇಕು. ಸರ್ಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಜನಸಾಮನ್ಯರೆಲ್ಲರೂ ಪಡೆದುಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾದೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ದ್ರಾಕ್ಷಾಯಿಣಿ ಬಿ.ಕೆ ಅವರು ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಬೂವನಹಳ್ಳಿ ವ್ಯಾಪ್ತಿಯ ಹೆಚ್ ಮೈಲಹಳ್ಳಿಲ್ಲಿಂದು ಏರ್ಪಡಿಸಲಾಗಿದ್ದ ಪೋಷಣ್ ಮಾಸಾಚಾರಣೆ ಹಾಗೂ ಪೌಷ್ಠಿಕ ಆಂದೋಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಅಪೌಷ್ಠಿಕತೆಯ ಬಗ್ಗೆ ಗರ್ಭಿಣಿ, ಬಾಣಂತಿ,

ಹದಿಹರೆಯದ ಹೆಣ್ಣು ಮಕ್ಕಳಿಗೆ ಕಾನೂನು ಅರಿವುಗಳ ಬಗ್ಗೆ ತಿಳಿಸಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜ್ಯೋತಿ ಲಕ್ಷ್ಮಿ ಕೆ.ಸಿ ಅವರು ಮಾತನಾಡಿ ಜನಸಾಮಾನ್ಯರು ಉಪಯೋಗಿಸುವ ಆಹಾರದ ಬಗ್ಗೆ, ಸಾವಯವ ಕೃಷಿ ಬಳಸಿ ಬೆಳೆಯುವ ಆಹಾರ ಪದಾರ್ಥ ಹಾಗೂ ಹಣ್ಣು ತರಕಾರಿಗಳನ್ನು

ಬಳಸಲು, ಗರ್ಭಿಣಿ ಮಹಿಳೆಯಲ್ಲಿ ಕಾಣಿಸಿಕೊಳ್ಳುವ ರಕ್ತಹೀನತೆ ಹಾಗೂ ಅವರ ಆಹಾರ ಪದ್ದತಿ ಬಗ್ಗೆ ತಿಳಿಸಿದರು.

ಇಲಾಖೆಯಿಂದ ಸಿಗುವ ಪೂರಕ ಪೌಷ್ಠಿಕ ಆಹಾರ, ಮೊಟ್ಟೆ ವಿತರಣೆ ಬಗ್ಗೆ ತಿಳಿಸಿದರು ಹಾಗೂ ಹಿರಿಯ ನಾಗರೀಕರು, ವಿಕಲ ಚೇತನ ಮಕ್ಕಳಿಗೆ ಇಲಾಖೆಯಿಂದ ಸಿಗುವ ಸೌಲಭ್ಯಗಳ ಬಗ್ಗೆ ತಿಳಿಸಿದರು. ಬಾಲ್ಯ ವಿವಾಹ ಮತ್ತು ಪೋಕ್ಸೋ ಕಾಯ್ದೆ, ಬಾಲ ಕಾರ್ಮಿಕರು, ಬಾಲ ನ್ಯಾಯ ಮಂಡಳಿ, ಬಾಲಾಪರಾಧಿ, ಮತ್ತು ಬುದ್ಧಿಮಾಂಧ್ಯ ಮಕ್ಕಳ ಬಗ್ಗೆ ಮಾಹಿತಿ ನೀಡಿದರು.

ಈ ವೇಳೆಯಲ್ಲಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗಂಗಮ್ಮ ಬಿ.ಸಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಜಾತಿ ನಿಂದನೆ ಆರೋಪ

## ಕರವೇ ಜಿಲ್ಲಾಧ್ಯಕ್ಷ ಸತೀಶ್ ಪಟೇಲ್ ಬಂಧನಕ್ಕೆ ಭೋವಿ ಸಮಾಜ ಅಗ್ರಹ



**ಹಾಸನ:** ಪ್ರತಿಭಟನೆ ವೇಳೆ ಸಾರ್ವಜನಿಕವಾಗಿ ಭೋವಿ ಸಮುದಾಯವನ್ನು ವಡ್ಡರು ಎಂದು ಕರೆಯುವ ಮೂಲಕ ಜಾತಿ ನಿಂದನೆ ಮಾಡಿರುವ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಜಿಲ್ಲಾಧ್ಯಕ್ಷ ಸತೀಶ್ ಪಟೇಲ್ ಬಂಧನಕ್ಕೆ ಆಗ್ರಹಿಸಿ ಎಸ್.ಪಿ ಕಚೇರಿಗೆ ಹಾಲೂರು ತಾಲೂಕು ಕಾರುಗೋಡು ಗ್ರಾಮಸ್ಥರು ದೂರು ನೀಡಿದರು.

ಬಳಿಕ ಪ್ರತಿಭಟನೆ ಉದ್ದೇಶಿಸಿ ಅಖಿಲ ಕರ್ನಾಟಕ ಭೋವಿ ಮಹಾಸಭಾ ರಾಜ್ಯಾಧ್ಯಕ್ಷ ಎಚ್ ಮಂಜಪ್ಪ ಮಾತನಾಡಿ, ಆಲೂರು ತಾಲೂಕಿನ ಹೊಸಮಠ ಗ್ರಾಮದ ಸರ್ವೆ ನಂಬರ್ 151 ರಲ್ಲಿ ಭೋವಿ ಸಮುದಾಯದ ಜನರು ಅಧಿಕೃತವಾಗಿ ಲೈಸೆನ್ಸ್ ಪಡೆದು ಸರ್ವೆ ನಂಬರ್ 151ರ ಜಾಗದಲ್ಲಿ ಕಾನೂನು ಬದ್ಧವಾಗಿ ಕಲ್ಲು ಗಣಿಗಾರಿಕೆ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಇದನ್ನು ಸಹಿಸದ ಕರವೇ ಮುಖಂಡರು ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಗಣಿಗಾರಿಕೆ ಬಂದ್ ಮಾಡಿಸಲು ಒತ್ತಡ ಹಾಕಿದ್ದಾರೆ ಎಂದು ದೂರಿದರು.

ಸೆಪ್ಟೆಂಬರ್ 15ರಂದು ಗಣಿಗಾರಿಕೆ ನಿಲ್ಲಿಸಲು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಸತೀಶ್ ಪಟೇಲ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸುತ್ತಿದ್ದಾಗ, ಅಪರ ಜಿಲ್ಲಾಧಿಕಾರಿ ಎದುರೇ ಸಮುದಾಯವನ್ನು ಉದ್ದೇಶ ತಮಿಳುನಾಡು ವಡ್ಡರು ಎಂದು ಹೇಳಿ ಜಾತಿಗೆ ನಿಂದನೆ ಮಾಡಿದ್ದಾರೆ.

ಈಗಾಗಲೇ ಈ ಕುರಿತು ಎಸ್ಪಿ ಕಚೇರಿಗೆ ದೂರು ನೀಡಲಾಗಿದ್ದು ಪೊಲೀಸರು ಶೀಘ್ರವೇ ಸತೀಶ್ ಪಟೇಲ್ ಅವರನ್ನು ಬಂಧಿಸಿ ಜಾತಿ ನಿಂದನೆ ಕೇಸು ದಾಖಲಿಸಬೇಕು ಎಂದು ಒತ್ತಾಯಿಸಿದರು.

ಅಲ್ಲದೆ ಗ್ರಾಮದ ಭರತ್, ಚೇತನ್, ಅರ್ಜುನ್, ವಿಜಯಕುಮಾರ್, ಸಭಾಶ್ವಿನ್, ಸ್ವಾನಿ ಸೇರಿದಂತೆ ಇನ್ನಿತರರು ಗಣಿಗಾರಿಕೆ ಸ್ಥಳಕ್ಕೆ ಬಂದು ಅಪ್ತ ವಸೂಲಿಗೆ ಮುಂದಾಗಿದ್ದಾರೆ. ಅದನ್ನು ನೀಡದ ಹಿನ್ನೆಲೆಯಲ್ಲಿ ಅಲ್ಲಿ ಓಡಾಡುವ ಗ್ರಾಮಸ್ಥರಿಗೆ ಬೆದರಿಕೆ ಹಾಕುವ ಜೊತೆಗೆ ಮಹಿಳೆಯರಿಗೂ ಕಿರಿಕಿರಿ ಮಾಡುವ ಕೆಲಸ ಮಾಡುತ್ತಿದ್ದಾರೆ. ಆದುದರಿಂದ ಪೊಲೀಸ್ ಇಲಾಖೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಟಿಯಲ್ಲಿ ಭೋವಿ ಸಂಘದ ಜಿಲ್ಲಾಧ್ಯಕ್ಷ ಸಂದೀಪ್, ತಾಲೂಕು ಅಧ್ಯಕ್ಷ ಪ್ರದೀಪ್, ಸಮುದಾಯದ ಮುಖಂಡರಾದ ನವೀನ್, ಮಹದೇವ್, ಶೇಖರ್, ಪ್ರೇಮ್ ಕುಮಾರ್, ಆರುಮೊಗಮ್, ಶ್ರೀನಿವಾಸ್, ಪ್ರಭು, ಶಾಂತಕುಮಾರ, ಮಂಜು ಸ್ವಾಮಿ, ರೂಪೇಶ್, ಶ್ರೀಧರ, ಯುವರಾಜ್, ಇತರರು ಉಪಸ್ಥಿತರಿದ್ದರು


## ಕರ್ನಾಟಕ ಸರ್ಕಾರ
## (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
## ಗ್ರಾಮ ಪಂಚಾಯಿತಿ ಕಾರ್ಯಾಲಯ, ತಣಿಗೆರೆ

ಚನ್ನಗಿರಿ (ತಾ), ದಾವಣಗೆರೆ (ಜಿ).

ನಂ:ಗ್ರಾಪಂ-ತಗೆ/ಟೆಂಡರ್/2025-26 ದಿನಾಂಕ:18-09-2025

### ಟೆಂಡರ್ ಪ್ರಕಟಣೆ

**ವಿಷಯ :2024-25 ಸಾಲಿನ 15 ನೇ ಹಣಕಾಸು ಯೋಜನೆಯಡಿ ತಣಿಗೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೆ.ಟಿ.ಪಿ.ಪಿ ನಿಯಾಮಾನುಸಾರ ಇ-ಪ್ರೊಕ್ಯೂರ್ ಮೆಂಟ್ ಮೂಲಕ ವಿವಿಧ ಟೆಂಡರ್ ಕರೆದಿರುವ ಬಗ್ಗೆ**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ 2024-25ನೇ ಸಾಲಿನ ಅಡಿಯಲ್ಲಿ ಅನುಮೋದಿತ ಕ್ರಿಯಾ ಯೋಜನೆಯಡಿಯಲ್ಲಿ ತಣಿಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಈ ಕೆಳಕಂಡ ಟೆಂಡರ್‌ನ್ನು ಕರೆಯಲಾಗಿದೆ.

| ಟೆಂಡರ್ ಸಂಖ್ಯೆ | ಟೆಂಡರ್ ಹೆಸರು | ಅಂದಾಜು ಮೊತ್ತ |
|---|---|---|
| RDPR/2025-26/ IND11279 | ತಣಿಗೆರೆ: ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿಗಳ ಖರೀದಿ ಮತ್ತು ಮೋಟಾರ್ ದುರಸ್ಥಿ ಹಾಗೂ ನಿರ್ವಹಣೆ (ಪ.ಜಾ/ಪ.ಪಂ ಮೀಸಲಿರಿಸಿದ ಅನುದಾನ ಸೇರಿ) | ರೂ.4,47,500/- |
| RDPR/2025-26/ IND11283 | ತಣಿಗೆರೆ: ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗೆ ಬೀದಿ ದೀಪ ಸಾಮಗ್ರಿಗಳ ಖರೀದಿ ಮತ್ತು ನಿರ್ವಹಣೆ (ಪ.ಜಾ/ಪ.ಪಂ ಮೀಸಲಿರಿಸಿದ ಅನುದಾನ ಸೇರಿ) | ರೂ.4,58,038/- |

ಈ ಸಂಬಂಧ ಕೆ.ಟಿ.ಪಿ.ಪಿ. ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ- ಟೆಂಡರ್‌ಗಾಗಿ ಅರ್ಹ ಟೆಂಡರ್‌ದಾರರು ಸಂಸ್ಥೆಗಳು ಭರ್ತಿ ಮಾಡಿ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ e-Procurement Portal ಪದ್ದತಿಯಂತೆ ಮಾತ್ರ ಸಲ್ಲಿಸತಕ್ಕದ್ದು.ಟೆಂಡರ್ ಭರ್ತಿ ಮಾಡಲು ಕೊನೆಯ ದಿನಾಂಕ :25.09.2025 ಹಾಗೂ ಹೆಚ್ಚಿನ ಮಾಹಿತಿಗೆ http:/kppp.karnataka.gov.in ಪೋರ್ಟಲ್ ಅಥವಾ ಕಚೇರಿ ಸಮಯದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಣಿಗೆರೆ ಇವರನ್ನು ಸಂಪರ್ಕಿಸುವುದು.

ಸಹಿ/-
**ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ, ತಣಿಗೆರೆ**

ಸಹಿ/-
**ಅಧ್ಯಕ್ಷರು ಗ್ರಾಮ ಪಂಚಾಯಿತಿ, ತಣಿಗೆರೆ**

# ನಿಮಿಷಾಂಬಾ ಜ್ಯೋತಿಶ್ರೀ ನಾಟ್ಯ ಅಕಾಡೆಮಿಯ ವಿದ್ಯಾರ್ಥಿನಿಯರ ಸಾಧನೆ



**ಗದಗ** : ಮಕ್ಕಳ ಮತ್ತು ಮಹಿಳಾ ಇಲಾಖೆ ವತಿಯಿಂದ ನಡೆಸಿದ ಜಿಲ್ಲಾ ಮಟ್ಟದ ನೃತ್ಯ ಸ್ಪರ್ಧೆಯಲ್ಲಿ ನಗರದ ನಿಮಿಷಾಂಬಾ ಜ್ಯೋತಿಶ್ರೀ ನಾಟ್ಯ ಅಕಾಡೆಮಿಯ ವಿದ್ಯಾರ್ಥಿನಿಯರು ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿನಿಯರಿಗೆ ನಿಮಿಷಾಂಬಾ ಜ್ಯೋತಿಶ್ರೀ ನಾಟ್ಯ ಅಕಾಡೆಮಿಯ ಅಧ್ಯಕ್ಷರಾದ ರಾಘವಿ ಜ್ಯೋತಿಶ್ರೀ ಹಾಗೂ ಪದಾಧಿಕಾರಿಗಳು ಮತ್ತು ಪಾಲಕರು ಅಭಿನಂದಿಸಿದ್ದಾರೆ.

# ಹೊನ್ನಾಳಿ ಬಿಜೆಪಿ ಮುಖಂಡರ ಆರೋಪ ಸತ್ಯಕ್ಕೆ ದೂರ: ಪರಾಜಿತ ಅಭ್ಯರ್ಥಿ ಡಿ.ಜಿ.ವಿಶ್ವನಾಥ್ ಸ್ಪಷ್ಟನೆ

**ದಾವಣಗೆರೆ:** ನ್ಯಾಮತಿ ತಾಲ್ಲೂಕಿನ ವ್ಯವಸಾಯೋತ್ಪನ್ನ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಬಿಜೆಪಿ ಮಾಜಿ ಅಧ್ಯಕ್ಷ ಎಂ.ಪಿ.ರೇಣುಕಾಚಾರ್ಯ ತಮಗೆ ಬೆಂಬಲಿಸಿದ್ದಾರೆ ಎಂಬ ಹೊನ್ನಾಳಿ ಬಿಜೆಪಿ ಮುಖಂಡರ ಆರೋಪ ಸತ್ಯಕ್ಕೆ ದೂರವಾದುದು ಎಂದು ಪರಾಜಿತ ಅಭ್ಯರ್ಥಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ, ಜಿಪಂ ಮಾಜಿ ಸದಸ್ಯ ಡಿ.ಜಿ.ವಿಶ್ವನಾಥ್ ಸ್ಪಷ್ಟನೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಡೆದ ನ್ಯಾಮತಿ ವ್ಯವಸಾಯೋತ್ಪನ್ನ ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ತಾವು ಸ್ಪರ್ಧಿಸಿ ಕೇವಲ ಒಂದು ಮತದ ಅಂತರದಲ್ಲಿ ಬಿಜೆಪಿ ಬೆಂಬಲಿತ

ಅಭ್ಯರ್ಥಿಯಿಂದ ಪರಾಜಿತಗೊಂಡೆ. ನಮ್ಮ ಆತ್ಮೀಯರಾದವರು ನಮಗೆ ಮತ ಚಲಾಯಿಸಿರುತ್ತಾರೆ. ಅವರಿಗೆ ಆತ್ಮೀಯರಾದ ನಮ್ಮ ಕಡೆಯವರು ಅವರಿಗೆ ಮತ ಚಲಾಯಿಸಿರುತ್ತಾರೆ. ಹಾಗೆಂದ ಮಾತ್ರಕ್ಕೆ ನಾನು ಆ ವಿಷಯವನ್ನು ದೊಡ್ಡದು ಮಾಡಲು ಹೋಗಲಿಲ್ಲ. ಚುನಾವಣೆಯಲ್ಲಿ ಸೋಲು-ಗೆಲುವು ಸಹಜ. ಆದರೆ, ಹೊನ್ನಾಳಿ ಬಿಜೆಪಿ ಮುಖಂಡರಾದ ಎ.ಬಿ. ಹನುಮಂತಪ್ಪ, ಶಾಂತರಾಜ್ ಪಾಟೀಲ್ ಅವರು ರೇಣುಕಾಚಾರ್ಯ ನನ್ನನ್ನು ಬೆಂಬಲಿಸಿದ್ದಾರೆ ಎಂದು ಸುಳ್ಳು ವದಂತಿ ಹಬ್ಬಿಸುತ್ತಿರುವುದು ಸರಿಯಲ್ಲ ಎಂದರು.

ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿಯೂ ಎಂ.ಪಿ. ರೇಣುಕಾಚಾರ್ಯ ಹಿಂಬಾಗಿಲಿನಿಂದ ಕಾಂಗ್ರೆಸ್‌ಗೆ ಬೆಂಬಲಿಸಿದ್ದಾರೆ ಎನ್ನುವ ಆರೋಪದಲ್ಲಿಯೂ ಹುರುಳಿಲ್ಲ.

ಏಕೆಂದರೆ ಶಾಮನೂರು ಕುಟುಂಬ ತನ್ನ ವರ್ಚಸ್ಸು ಮತ್ತು ಕಾರ್ಯಕರ್ತರ ಶ್ರಮ, ಕಾಂಗ್ರೆಸ್ ಘೋಷಿಸಿದ ಪ್ರಣಾಳಿಕೆಯಿಂದ ಗೆಲುವು ಸಾಧಿಸಿದೆ ಎಂದು ಆರೋಪ ತಳ್ಳಿ ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಮಧುಸೂಧನ, ಸತೀಶ್, ಟಿ.ವೀರಭದ್ರಪ್ಪ, ಕೆ.ಜಿ.ರವಿ ಮತ್ತಿತರರಿದ್ದರು.

### ಸಿ.ಎಂ. ಗಣಿ ಧಣಿಗಳ ವಿರುದ್ಧ ಕ್ರಮ ತೆಗೆದುಕೊಳ್ಳದೆ ಮೌನವಹಿಸಿದ್ದು ವಿಷಾದನೀಯ : ಚೇತನ್‌ಅಹಿಂಸಾ

# ಗಣಿಭಾದಿತರ ಗ್ರಾಮಗಳಲ್ಲಿ ಹೆಚ್ಚಿದ ಕ್ಯಾನ್ಸರ್ ಮಕ್ಕಳ ಮೇಲೆ ರೋಗಗಳದಾಳಿ ,ಪರಿಸರ ಹಾನಿ

**ಚಿತ್ರದುರ್ಗ:** ಸಿದ್ದರಾಮಯ್ಯ ಅವರು ಶಪಥ ಮಾಡಿ ಬಳ್ಳಾರಿಗೆ ಪಾದಯಾತ್ರೆ ಮಾಡಿ ದೇಶದಲ್ಲಿ ಸಂಚಲನ ಸೃಷ್ಟಿಸಿದ ಬಳಿಕ ರಾಜ್ಯದ ಸಿಎಂ ಆದರು. ಆದರೆ ಮುಖ್ಯಮಂತ್ರಿಯಾದ ಬಳಿಕ ಗಣಿ ಧಣಿಗಳ ವಿರುದ್ಧ ಕ್ರಮ ತೆಗೆದುಕೊಳ್ಳದೆ ಮೌನವಹಿಸಿದ್ದು ವಿಷಾದನೀಯ ಎಂದು ನಟ ಅಹಿಂಸಾ ಚೇತನ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಗಣಿ ಬಾಧಿತ ಹೋರಾಟ ಸಮಿತಿಯಿಂದ ಆಯೋಜಿಸಿದ್ದ ಗಣಿಬಾಧಿತ ಪ್ರದೇಶ ಗಳ ಜನರ ಸಂಕಷ್ಟಗಳು, ಪರಿಸರ ಅಸಮತೋಲನ ಮತ್ತು ಚಿತ್ರದುರ್ಗ ಜಿಲ್ಲೆ ಅಭಿವೃದ್ಧಿಯಲ್ಲಿ ಗಣಿಗಳ ಮಹತ್ವ ಸಂವಾದ ಕಾರ್ಯಕ್ರಮದಲ್ಲಿ ಅವರುಮಾತನಾಡಿದರು.

ಸಿಎಂ ಸಿದ್ದರಾಮಯ್ಯ ಅವರಿಗೆ ಗಣಿಗಾರಿಕೆಗೆ ಏನೋ ಒಂದು ನಂಟಿದೆ. ಸಿಎಂ ಸಿದ್ದರಾಮಯ್ಯ ಸಿಂಗಲ್ ವಿಂಡೋ ಎಂದು ಘೋಷಣೆ ಮಾಡಿ, ಈಗ ಗಣಿಗಾರಿಕೆ ಮಾಡುವವರಿಗೆ ಸಹಾಯ ಮಾಡಿದ್ದಾರೆ. ಆದರೆ ಸರ್ಕಾರ ಇದನ್ನು ಮತ್ತೊಮ್ಮೆ ಪರಿಶೀಲಿಸಬೇಕು. ಪದೇ ಪದೇ ತಪ್ಪು ಮಾಡಿ ಗಣಿಗಾರಿಕೆ ಮಾಡುತ್ತಿರು ವವರಿಗೆ ಲೈಸೆನ್ಸ್ ಕೊಡಬಾರದು.

ಪರಿಸರಕ್ಕೆ ಗಣಿಗಾರಿಕೆ ಅನ್ನೋದು ಅತ್ಯಂತ ಅಪಾಯಕಾರಿಯಾಗಿದೆ. ಕೊಡಗು, ಸಂಡೂರು, ಚಿತ್ರದುರ್ಗದಲ್ಲಿ ಗಣಿಗಾರಿಕೆಯಿಂದ ಹಲವು ಸಮಸ್ಯೆ ಗಳು ಆಗುತ್ತಿವೆ. ಗಣಿಗಾರಿಕೆ ಮಾಡುವ ವರಿಗೆ ಸರ್ಕಾರ ಸಹಾಯ ಮಾಡದೆ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಸರ್ಕಾರ ಬೇಕು. ಮುಂದಿನ ದಿನಗಳಲ್ಲಿ ಈ ಬಗ್ಗೆ ಸರ್ಕಾರದ ಮೇಲೆ ಒತ್ತಡ ಹಾಕುವ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಚಿತ್ರದುರ್ಗದ ಕಾವಾಡಿಗರಹಟ್ಟಿ ದುರ್ಘಟನೆ ಬಗ್ಗೆ ಪ್ರಸ್ತಾಪ ಮಾಡಿ, ಕಾವಾಡಿಗರಹಟ್ಟಿಯಲ್ಲಿ ಕಲುಷಿತ ನೀರು ಸಮಸ್ಯೆಯಿಂದಾಗಿ ನೂರಾರು ಮಂದಿ ಆಸ್ಪತ್ರೆ ಸೇರಿದ್ದರು. 06 ಮಂದಿ ಮೃತಪಟ್ಟಿದ್ದರು. ಒಂದು ರೀತಿ ಪರಿಸರ ಸ್ವಚ್ಛತೆ ಇಲ್ಲದ ಕಾರಣದಿಂದ ಘಟನೆ



ಸಂಭವಿಸಿತು ಅದು ಎಂದು ನಟ ಅಹಿಂಸಾ ಚೇತನ್ ಹೇಳಿದರು.

ಕರ್ನಾಟಕ ರಾಜ್ಯ ಗಣಿಬಾಧಿತ ಪ್ರದೇಶ ಹೋರಾಟ ಸಮಿತಿ ಅಧ್ಯಕ್ಷರಾದ ರಮೇಶ್ ಬಿ.ದುರ್ಗ ಮಾತನಾಡಿ,ಪರಿಸರ ಅಸಮತೋಲನದಿಂದ ಜೇನುನೊಣಗಳು ಮಾಯವಾಗಿವೆ. ಗಣಿಬಾಧಿತ ಪ್ರದೇಶಗಳ ಜನರ ಸಂಕಷ್ಟಗಳು ದಿನ ದಿನೇ ಹೆಚ್ಚಿದ್ದು, ಗಣಿಭಾದಿತ ಗ್ರಾಮಗಳಲ್ಲಿ ಕ್ಯಾನ್ಸರ್ ರೋಗ ಹೆಚ್ಚುತ್ತಿದೆ. ಮಕ್ಕಳ ಮೇಲೆ ರೋಗಗಳ ದಾಳಿಯಾಗುತ್ತಿವೆ. ರೋಡು ಗಳು ಗುಂಡಿಗಳ ತಾಣವಾಗಿದ್ದು ಅಪಘಾತಗಳು ಹೆಚ್ಚಾಗುತ್ತಿವೆ. ಇದನ್ನು ಅರಿಯಲು ಜಿಲ್ಲಾಧಿಕಾರಿಗಳು ಗ್ರಾಮ ವಾಸ್ತವ್ಯ ಮಾಡಲಿ, ಜೊತೆಗೆ ಪೊಲೀಸ್ ರಕ್ಷಣಾಧಿಕಾರಿಗಳು , ಜಿಪಂ ಸಿಇಒ, ಗಣಿ ಅಧಿಕಾರಿಗಳು, ಆರೋಗ್ಯ ಅಧಿಕಾರಿಗಳು ಆಗಮಿಸಿ ಸಮಸ್ಯೆ ಅರಿಯಲಿ ಎಂದರು.

ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ ಅಧ್ಯಕ್ಷ ಮಾಲತೇಶ್ ಅರಸ್, ಮಾತನಾಡಿ, ಪರಿಸರ ಮತ್ತು ವನ್ಯಜೀವಿಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ, ಮೀಸಲು ಅರಣ್ಯ ದಲ್ಲಿ ಲಾರಿಗಳ ಸಂಚಾರ ಹೆಚ್ಚಾಗಿ ಕರಡಿ

ಚಿರತೆಗಳು ಕಾಡಿನಿಂದ ನಾಡಿಗೆ ಬರುತ್ತಿವೆ ಜಿಲ್ಲೆಯಲ್ಲಿ ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗಿದೆ. ಬಗ್ಗೆ ರಾಜ್ಯದ ಪರಿಸರವಾದಿಗಳ ಸಭೆ ಮಾಡಿ ವನ್ಯಜೀವಿಗಳ ಸಂರಕ್ಷಣೆಗಾಗಿ ಆಂದೋಲನ ಮಾಡುತ್ತೇವೆ ಎಂದರು.

ಸಂವಾದದಲ್ಲಿ ಕರ್ನಾಟಕ ರಾಜ್ಯ ಗಣಿಬಾಧಿತ ಪ್ರದೇಶ ಹೋರಾಟ ಸಮಿತಿ ಅಧ್ಯಕ್ಷರಾದ ರಮೇಶ್ ಬಿ.ದುರ್ಗ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ ಅಧ್ಯಕ್ಷ ಮಾಲತೇಶ್ ಅರಸ್, ಜಲ ಜಾಗೃತಿ ವಿಭಾಗದ ಉಪಾಧ್ಯಕ್ಷ ಕೆ.ಓಂಕಾರಪ್ಪ ಮೌರ್ಯ, ಕರ್ನಾಟಕ ರಾಜ್ಯ ಗಣಿಬಾಧಿತ ಪ್ರದೇಶ ಹೋರಾಟ ಸಮಿತಿ ಮುಖಂಡ ಓಂಕಾರಪ್ಪ ಸಮಗ್ರ ಮಾಹಿತಿ ನೀಡಿದರು.

ಸಂವಾದದಲ್ಲಿ ಪದಾಧಿಕಾರಿಗಳಾದ ರಮೇಶ್ ನಾಯ್ಕ, ಜಿ. ಸಿ ಮಹೇಶ್, ಈಶ್ವರಪ್ಪ, ಮರುಳಪ್ಪ, ಮಹಾದೇವಪ್ಪ, ರಂಗಸ್ವಾಮಿ, ಪುಟ್ಟನಾಯ್ಕ , ಮಹೇಶ್ವರಪ್ಪ, ಶಿವಕುಮಾರ್, ಜಿ.ಆರ್ ಲೋಹಿತ್, ವೀರೇಶ್ ಬೀಮಸಮುದ್ರ ಭಾಗವಹಿಸಿದ್ದರು. ಅನೇಕ ಪತ್ರಕರ್ತರೂ ಭಾಗವಹಿಸಿ ಪ್ರಶ್ನೋತ್ತರಗಳನ್ನು ಮಾಡಿ ಯಶಸ್ವಿಯಾಗಿ ನಡೆಸಿದರು.

ನಂತರ ಗಣಿಬಾಧಿತ ಪ್ರದೇಶಗಳಾದ ತಣಿಗೇಹಳ್ಳಿ, ವಿ ಪಾಳ್ಯ ಮದಕರಿಪುರ ಗ್ರಾಮದಲ್ಲಿ ಅಧ್ಯಯನ ಮತ್ತು ಸಂಶೋಧನಾ ತಂಡದ ದೊಂದಿಗೆ ಚೇತನ್ ಬೇಟಿ ನೀಡಿದರು. ಅಲ್ಲಿನ

ನೋವು ಗಳನ್ನು ಆಲಿಸಿದರು..

# ಮಹಿಳೆಯರು ರಾಜಕೀಯ ಮುಂಚೂಣಿಗೆ ಬರಲು ಕರೆ

**ದಾವಣಗೆರೆ** : ಕಾಂಗ್ರೆಸ್ ಪಕ್ಷ ಮಹಿಳಾ ಅಧ್ಯಕ್ಷರನ್ನು ಹೊಂದಿದ್ದ ಏಕೈಕ ಪಕ್ಷವಾಗಿದ್ದು ಪ್ರತಿಯೊಬ್ಬ ಕಾಂಗ್ರೆಸ್ ಪಕ್ಷದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಇಂದಿರಾಗಾಂಧಿಯಂತೆ ದಿಟ್ಟತನದಿಂದ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ನ ಕಾರ್ಯದರ್ಶಿ ಮಂಜುಳಾ ನಾಯಕ ಅವರು ಕರೆ ನೀಡಿದರು.

ಅವರಿಂದು ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷ ಪ್ರತಿಯೊಬ್ಬರಿಗೂ ಯಾವುದೇ ಜಾತಿ ಧರ್ಮ ನೋಡದೆ ಅವಕಾಶ ನೀಡುತ್ತಿದ್ದು ಈ ಪಕ್ಷದಲ್ಲಿ ಮಹಿಳೆಯರು ಉನ್ನತ ಹುದ್ದೆಗೆ ಏರಲು ಅವಕಾಶಗಳಿದ್ದು ಈ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮುನ್ನಡೆ ಸಾಧಿಸಬೇಕೆಂದು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ದಿನೇಶ್ ಕೆ ಶೆಟ್ಟಿ ಮಾತನಾಡಿ ದಾವಣಗೆರೆಯಲ್ಲಿ ಮಹಿಳಾ ಕಾಂಗ್ರೆಸ್ ಪಕ್ಷ ಬಲಿಷ್ಠ ವಾಗಿದ್ದು ಇದಕ್ಕೆ ರಾಜ್ಯ ಘಟಕ ಬೆಂಬಲವಾಗಿ ನಿಂತು ಇನ್ನಷ್ಟು ಪಕ್ಷದ ಸಂಘಟನೆಗೆ ಒತ್ತು ನೀಡಬೇಕೆಂದರು.

ಜಿಲ್ಲಾ ಮಹಿಳಾ ಕಾಂಗ್ರೆಸ್ ನ ಅಧ್ಯಕ್ಷರಾದ ಶ್ರೀಮತಿ ಅನಿತಾಭಾಯಿ ಮಾತನಾಡಿ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕ ಕಾರ್ಯ ನಿರ್ವಹಣೆ ಬಗ್ಗೆ ವರದಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಮಂಗಳಮ್ಮ, ಮಂಜಮ್ಮ ಸೇರಿದಂತೆ ಪಕ್ಷದ ಪದಾಧಿಕಾರಿಗಳು ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಸಿಂಹ ವಿಷ್ಣುವರ್ಧನ್ ಸವಿ ನೆನಪು

ದಾವಣಗೆರೆ : ಸಾಹಸಸಿಂಹ, ಅಭಿನವ ಭಾರ್ಗವ, ಕರ್ನಾಟಕ ರತ್ನ ಡಾಕ್ಟರ್ ವಿಷ್ಣುವರ್ಧನ್ ಅವರ 75ನೇ ವರ್ಷದ ಹುಟ್ಟುಹಬ್ಬವನ್ನು ದಾವಣಗೆರೆಯ ರಿಂಗ್ ರೋಡಿನಲ್ಲಿರುವ ಡಾಕ್ಟರ್ ವಿಷ್ಣುವರ್ಧನ್ ಸರ್ಕಲ್ ನಲ್ಲಿ ಅಭಿಮಾನಿಗಳು ಸೆಪ್ಟೆಂಬರ್ 18,2025 ರಂದು ಕೇಕ್ ಕತ್ತರಿಸಿ ಅದ್ದೂರಿಯಾಗಿ ಸಂಭ್ರಮಾಚರಿಸಿ ನೆನೆದರು.

ಇದೇ ವೇಳೆ ವಿಷ್ಣುವರ್ಧನ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಆರಾಧಿಸಿ ಅವರ ನೆನಪಿನಲ್ಲಿ ಸಾರ್ವಜನಿಕರಿಗೆ ಉಪಹಾರ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ನಗರ ಪಾಲಿಕೆಯ ಮಾಜಿ ಸದಸ್ಯರಾದ ಶ್ರೀಮತಿ ಆಶಾ ಉಮೇಶ್. ಕಾಂಗ್ರೆಸ್ ಮುಖಂಡರಾದ ಉಮೇಶ್, ವಿನಾಯಕ, ಮನು ಎಂ, ನಾರಾಯಣ ಮೂರ್ತಿ ಆರ್ ರಂಗನಾಥ್ ಜಿಹೆಚ್, ತಿಮ್ಮೇಶ್ ಎಸ್, ರಾಜಶೇಖರ್ ಕೊಂಡಜ್ಜಿ, ಅಶೋಕ್, ಆಟೋ ಮಂಜುನಾಥ್, ರಾಜು, ರವಿ ಸ್ವಾಮಿ, ಗಾಯಕ ಶಿವಕುಮಾರ್, ರಮೇಶ್,




ರಂಗನಾಥ್, ಪ್ರವೀಣ್, ಚೆಲುವಪ್ಪ, ರವಿ ಚಿಕ್ಕಣ್ಣ ಸೇರಿದಂತೆ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು.

# ವಲಯ ಕ್ರೀಡೆ: ಮೌಂಟೇನ್ ವ್ಯೂ ಪ್ರೌಢಶಾಲೆಯ ಉತ್ತಮ ಸಾಧನೆ

**ಚಿಕ್ಕಮಗಳೂರು:** ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ಎ.ವಲಯ ಮಟ್ಟದ ಕ್ರೀಡಾಕೂಟದಲ್ಲಿ ಮೌಂಟೇನ್ ವ್ಯೂ ಪ್ರೌಢಶಾಲೆಯು ಶಿಕ್ಷಣದ ಜೊತೆಗೆ ಕ್ರೀಡೆಯಲ್ಲೂ ಅತ್ಯುತ್ತಮ ಸಾಧನೆ ಪ್ರದರ್ಶಿಸಿದೆ.

ಬಾಲಕರ ವೈಯಕ್ತಿಕ ಚಾಂಪಿಯನ್ ಶಿಪ್‌ನಲ್ಲಿ ಸಯ್ಯದ್ ಶುಹೇಬ್ 800 ಮೀ. ಓಟ ಪ್ರಥಮ, 1500 ಮೀ. ಓಟ ಪ್ರಥಮ, 3000 ಮೀ. ಓಟ ಪ್ರಥಮ ಸ್ಥಾನ ಹಾಗೂ ಮೊಹಮ್ಮದ್ ಕಾಶಿಫ್ 100 ಮೀ. ಓಟ ಪ್ರಥಮ, 200 ಮೀ. ಓಟ ಪ್ರಥಮ, 400 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಬಾಲಕಿಯರ ವೈಯಕ್ತಿಕ ಚಾಂಪಿಯನ್ ಶಿಪ್‌ನಲ್ಲಿ ಸಮೀಕ್ಷಾ ಎ.ಯು. 800 ಮೀ. ಓಟ ದ್ವಿತೀಯ, 1500 ಮೀ. ಓಟ ಪ್ರಥಮ,



3000 ಮೀ. ಓಟದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ಬಾಲಕರ ವೈಯಕ್ತಿಕ ವಿಭಾಗದಲ್ಲಿ 200 ಮೀ. ಓಟ ದ್ವಿತೀಯ, 400 ಮೀ. ಓಟ ದ್ವಿತೀಯ, 800 ಮೀ. ಓಟ ತೃತೀಯ, 3000 ಮೀ. ಓಟ ತೃತೀಯ, 5000 ಮೀ. ನಡಿಗೆ ಪ್ರಥಮ ಹಾಗೂ 5000 ಮೀ. ನಡಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಬಾಲಕರ ಗುಂಪು ಆಟಗಳಲ್ಲಿ ಖೋಖೋ ಪ್ರಥಮ, ವಾಲಿಬಾಲ್ ಪ್ರಥಮ, ಕಬಡ್ಡಿ ಪ್ರಥಮ, 4100 ಮೀ. ರಿಲೇ ಪ್ರಥಮ, 4400 ಮೀ. ರಿಲೇ ಪ್ರಥಮ ಸ್ಥಾನ ಗಳಿಸಿದ್ದಾರೆ.

ಬಾಲಕಿಯರ ವೈಯಕ್ತಿಕ ವಿಭಾಗದಲ್ಲಿ 100 ಮೀ. ಓಟ ಪ್ರಥಮ, 800 ಮೀ. ಓಟ ತೃತೀಯ, 1500 ಮೀ. ಓಟ ದ್ವಿತೀಯ, 3000 ಮೀ. ನಡಿಗೆ ದ್ವಿತೀಯ, 3000 ಮೀ. ನಡಿಗೆ ತೃತೀಯ ಸ್ಥಾನ ಪಡೆದಿದ್ದಾರೆ.

ಬಾಲಕಿಯರ ಗುಂಪು ಆಟಗಳಲ್ಲಿ 4100 ಮೀಟರ್ ರಿಲೇ ದ್ವಿತೀಯ, 4400 ಮೀಟರ್ ರಿಲೇ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಸಾಧನೆಗೆ ವಿದ್ಯಾರ್ಥಿಗಳು ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕರುಗಳನ್ನು ಮೌಂಟೇನ್ ವ್ಯೂ ವಿದ್ಯಾಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ ವೃಂದದವರು ಅಭಿನಂದಿಸಿದರು.

# ಜಾತಿ ಗಣತಿ ಖಂಡಿಸಿ ವಿಶ್ವ ಹಿಂದೂ ಪರಿಷತ್ ಜಿಲ್ಲಾಧಿಕಾರಿಗಳಿಗೆ ಮನವಿ

**ಚಿಕ್ಕಮಗಳೂರು:** ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದಿಂದ ಸೆ.22 ರಿಂದ ಅ.7 ರವರೆಗೆ ರಾಜ್ಯಸರ್ಕಾರ ನಡೆಸಲು ಉದ್ದೇಶಿಸಿರುವ ಜಾತಿ ಗಣತಿಯನ್ನು ಖಂಡಿಸಿ ಮತ್ತು ಹಿಂದೂ ಧರ್ಮದ 47 ಉಪಜಾತಿಗಳಲ್ಲಿ ಕ್ರಿಶ್ಚಿಯನ್ ಪದ ಸೇರಿಸಿರುವ ಕ್ರಮವನ್ನು ವಿರೋಧಿಸಿ ಇಂದು ವಿಶ್ವ



ಹಿಂದೂ ಪರಿಷತ್ ಮುಖಂಡರು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಹಿಂದೂ ಉಪಜಾತಿಗಳಲ್ಲಿ ಸೇರಿಸಿರುವ ಕ್ರಿಶ್ಚಿಯನ್ ಪದ ಹಿಂಪಡೆಯಬೇಕು, ತಕ್ಷಣ ಸರ್ಕಾರ ಆಯೋಗಕ್ಕೆ ಸೂಚನೆ ನೀಡಿ 47 ಉಪಜಾತಿಗಳ ಪಟ್ಟಿಯನ್ನು ಕೈಬಿಡಬೇಕೆಂಬ ಮನವಿಯನ್ನು ಸೇರಿದಂತೆ ವಿವಿಧ 5 ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ. ರಾಜಶೇಖರ್ ಮಾತನಾಡಿ ರಾಜ್ಯದ ಜನರಿಗೆ ಶೈಕ್ಷಣಿಕ ಮತ್ತು ಸಾಮಾಜಿಕ ಜನಗಣತಿ ಎಂದು ಸುಳ್ಳು ಹೇಳಿ ಈಗ ಸರ್ಕಾರ ಜಾತಿಗಣತಿ ಮಾಡುತ್ತಿದೆ. ಜೊತೆಗೆ ಜಾತಿ ಎಂಬ ಹೊಸ ಕಾಲಂ ಅನ್ನು ಪ್ರಾರಂಭಿಸಿದೆ ಎಂದು ಆರೋಪಿಸಿದರು.

ಹಿಂದೂ ಜಾತಿ ಜನಾಂಗಗಳ ಜೊತೆಗೆ ಕ್ರಿಶ್ಚಿಯನ್ ಸಮುದಾಯ ಸೇರಿಸುವ ಮೂಲಕ ಹಿಂದೂಗಳ ಮಧ್ಯೆ ವಿಷ ಬೀಜ ಬಿತ್ತುವ ಕಾರ್ಯ ಹಾಗೂ ಸಂವಿಧಾನದಲ್ಲಿಲ್ಲದ ಪದ ಸೇರ್ಪಡಿಸಿರುವುದನ್ನು ಖಂಡಿಸಿದರು.

ಒಕ್ಕಲಿಗ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್, ಗಾಣಿಗ ಕ್ರಿಶ್ಚಿಯನ್ ಈ ರೀತಿ 47 ವಿವಿಧ ಜಾತಿಗಳಿಗೆ ಕ್ರಿಶ್ಚಿಯನ್ ಎಂದು ಸೇರಿಸುವ ಮೂಲಕ ಮತಾಂತರಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆಂದು ಆರೋಪಿಸಿದರು.

ಇಂದು 40 ವಿವಿಧ ಜಾತಿಯ ಮುಖಂಡರು, ಅಧ್ಯಕ್ಷರು ಸೇರಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಕೂಡಲೇ ರಾಜ್ಯಸರ್ಕಾರ ಪಟ್ಟಿಯಲ್ಲಿ ಇರುವ ಕ್ರಿಶ್ಚಿಯನ್ ಪದವನ್ನು ತೆಗೆಯಬೇಕು, ಇಲ್ಲದಿದ್ದರೆ ಸಮಸ್ತ ಹಿಂದೂಗಳು ಸಂಘಟಿತರಾಗಿ ಶಕ್ತಿ ಪ್ರದರ್ಶನ ಮಾಡಲಿದ್ದಾರೆಂದು ಎಚ್ಚರಿಸಿದರು.

ಮುಖ್ಯಮಂತ್ರಿಗಳು ಹಿಂದೂ ವಿರೋಧಿ ನೀತಿ ಅನುಸರಿಸುತ್ತ, ಹಿಂದೂ ಧರ್ಮವನ್ನು ಒಡೆಯುವ ಯತ್ನವನ್ನು ಮಾಡುತ್ತಿದ್ದಾರೆ. ಇದನ್ನು ಖಂಡಿಸಿ ಹಿಂದೂ ಸಮಾಜವನ್ನು ಒಗ್ಗೂಡಿಸಿ ಮುಂದೆ ಬೃಹತ್ ಹೋರಾಟ ರೂಪಿಸುವುದಾಗಿ ಹೇಳಿದರು.

ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಬಿ.ಹೆಚ್ ಶ್ರೀಕಾಂತ್ ಪೈ ಮಾತನಾಡಿ, ವಿಹೆಚ್‌ಪಿ ನಿರ್ಣಯಕ್ಕೆ ಎಲ್ಲಾ ಸಮುದಾಯದ ಮುಖಂಡರು ಬದ್ಧರಾಗುವುದಾಗಿ ಹೇಳಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಈಡೇರಿಸದಿದ್ದರೆ ಹಿಂದೂ ಸಮುದಾಯದ ಎಲ್ಲರೂ ಸೇರಿ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಬಂಜಾರ ಸಂಘದ ಲಕ್ಷ್ಮಣ್‌ನಾಯ್ಕ ಮಾತನಾಡಿ, ಹಿಂದೂಗಳ ಮಧ್ಯೆ ವಿಷ ಬೀಜ ಬಿತ್ತಿ, ರಾಜಕೀಯಕ್ಕಾಗಿ ಜಾತಿ ಸಮೀಕ್ಷೆ ನಡೆಸುವ ಮೂಲಕ ಮತಾಂತರಕ್ಕೆ ಪ್ರಚೋದನೆ ನೀಡುತ್ತಿದ್ದಾರೆಂದು ಆರೋಪಿಸಿದರು.

# ಅರ್ಜಿ ಆಹ್ವಾನ

**ಶಿವಮೊಗ್ಗ:** ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಅಧೀನದಲ್ಲಿ ಬರುವ ವಿವಿಧ ಕಾರ್ಯಕ್ರಮದಲ್ಲಿ ಖಾಲಿಯಿರುವ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಆರ್ಹರಿಂದ ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನಿಸಿದೆ.

ಎನ್‌ಪಿಎನ್‌ಸಿಸಿ ಕಾರ್ಯಕ್ರಮದಡಿ ಎಂಬಿಬಿಎಸ್ ವೈದ್ಯರ 10 ಹುದ್ದೆಗಳಿಗೆ 3 ವರ್ಷ ಕೆಲಸ ಮಾಡಿದ ಅನುಭವವಿರುವ ಎಂಬಿಬಿಎಸ್ ವಿದ್ಯಾರ್ಹತೆಯಿರಬೇಕು. ಶುಶ್ರೂಷಾಧಿಕಾರಿಯ 1 ಹುದ್ದೆಗೆ ಜಿಎನ್‌ಎಂ ವಿದ್ಯಾರ್ಹತೆ ಮತ್ತು 2 ವರ್ಷ ಕೆಲಸ ಮಾಡಿದ ಅನುಭವವಿರಬೇಕು.ಎನ್‌ಪಿಹೆಚ್‌ಸಿಇ ಕಾರ್ಯಕ್ರಮದಡಿ ತಜ್ಞವೈದ್ಯರ (ಎಂ.ಡಿ. ಇಂಟರ್ನಲ್ ಮೆಡಿಸಿನ್/ಜನರಲ್ ಮೆಡಿಸಿನ್) 1 ಹುದ್ದೆಗೆ ಎಂಬಿಬಿಎಸ್-ಎಚಿಡಿ(ಇಂಟರ್ನಲ್ ಮೆಡಿಸಿನ್/ಜಿಎಂ) ವಿದ್ಯಾರ್ಹತೆ ಹಾಗೂ 3 ವರ್ಷ ಕಾರ್ಯ ನಿರ್ವಹಿಸಿದ ಅನುಭವವಿರಬೇಕು.ಆಸಕ್ತರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಬಿ.ಹೆಚ್.ರಸ್ತೆ ಇಲ್ಲಿ ಸೆ. 22 ರಂದು ನಡೆಯುವ ನೇರ ಸಂದರ್ಶನಕ್ಕೆ ಬೆಳಗ್ಗೆ 11.00ಕ್ಕೆ ದಾಖಲೆಗಳ ಮೂಲ ಪ್ರತಿ ಮತ್ತು ಛಾಯಾಪ್ರತಿಗಳೊಂದಿಗೆ ಹಾಜರಾಗುವಂತೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# 29 ಪ್ರಕರಣ ರೂ.5700/- ದಂಡ



**ದಾವಣಗೆರೆ** : ದಾವಣಗೆರೆ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೆ.18 ರಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಮಹಾನಗರ ಪಾಲಿಕೆ ಮತ್ತು ಪೊಲೀಸ್ ಇಲಾಖೆಯ ವತಿಯಿಂದ ವಿವಿಧ ಕಡೆ ತಪಿಸಣೆ ನಡೆಸಿ 29 ಪ್ರಕರಣಗಳನ್ನು ದಾಖಲಿಸಿ ರೂ.5700/- ದಂಡ ವಿಧಿಸಲಾಯಿತು.

ದಾಳಿಯಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ಸತೀಶ ಕಲಹಾಳ, ತಾಲ್ಲೂಕಿನ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವೆಂಕಟಾಚಲಕುಮಾರ, ಮಹಾನಗರ ಪಾಲಿಕೆ ಆರೋಗ್ಯ ನಿರೀಕ್ಷಕರಾದ ಹರೀಶ್ ಕೆ ಎನ್. ವಿದ್ಯಾನಗರ ಪೊಲೀಸ್ ಠಾಣೆ ಉಪ ನಿರೀಕ್ಷಕ ಜಿ ನಾಗರಾಜ, ಎ ಎಸ್ ಐ ಚನ್ನಕೇಶವ ಹಾಗೂ ಪೇದೆ ಕೋಟ್ರೇಶ್ ಹಾಜರಿದ್ದರು.

# ಮೆದುಳು ತಿನ್ನುವ ಅಮೀಬಾ: ರಾಜ್ಯದಲ್ಲಿ ಸೋಂಕು ಪತ್ತೆಯಾಗಿಲ್ಲ : ತಜ್ಞರು

**ಬೆಂಗಳೂರು:** ಮೆದುಳು ತಿನ್ನುವ ಅಮೀಬಾ ಕೇರಳ ಸರ್ಕಾರ ನಿದ್ದೆ ಕೆಡಿಸಿದ್ದು, ಸೋಂಕಿಗೆ ಈ ವರೆಗೂ 17ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಈ ನಡುವೆ ಸೋಂಕು ಕುರಿತು ರಾಜ್ಯದಲ್ಲೂ ಆತಂಕ ಶುರುವಾಗಿದ್ದು, ಸೋಂಕು ಕುರಿತು ಜಾಗೃತಿ ಹಾಗೂ ಸೋಂಕು ತಡೆಗಟ್ಟುವ ಕ್ರಮಗಳ ಅಗತ್ಯವನ್ನು ಆರೋಗ್ಯ ತಜ್ಞರು ಒತ್ತಿ ಹೇಳಿದ್ದಾರೆ.

ಸಕ್ರಾ ವರ್ಲ್ಡ್ ಆಸ್ಪತ್ರೆಯ ನರವಿಜ್ಞಾನ ಸಂಸ್ಥೆಯ ನಿರ್ದೇಶಕ ಮತ್ತು ಮುಖ್ಯಸ್ಥ ಡಾ. ಅರ್ಜುನ್ ಶ್ರೀವತ್ಸ, ಅವರು ಮಾತನಾಡಿ, ನೇಗ್ಲೇರಿಯಾ ಫೌಲೇರಿ ಅಮೀಬಾದಿಂದ ಉಂಟಾಗುವ ಅಮೀಬಿಕ್ ಎನ್ಸೆಫಾಲಿಟಿಸ್ ಕಲುಷಿತ ನೀರಿಗೆ ಒಡ್ಡಿಕೊಂಡ ಒಂದರಿಂದ ಒಂಬತ್ತು ದಿನಗಳ ನಂತರ ಬೆಳವಣಿಗೆಯಾಗುತ್ತದೆ. ಸೋಂಕು ಮೂಗಿನ ಕುಹರದ ಮೂಲಕ ಪ್ರವೇಶಿಸುತ್ತದೆ. ವೇಗವಾಗಿ ಮಿದುಳು ಪ್ರವೇಶಿಸಿ, ಮಾರಕವಾಗಿ ಪರಿಣಮಿಸಲಿದೆ ಎಂದು ಹೇಳಿದ್ದಾರೆ.

ಸೋಂಕಿಗೊಳಗಾದವರಲ್ಲಿ ಅತೀವ್ರ ತಲೆನೋವು, ಜ್ವರ, ವಾಕರಿಕೆ, ವಾಂತಿ, ಕುತ್ತಿಗೆ ಬಿಗಿತ, ಗೊಂದಲ, ಸಮತೋಲನ ನಷ್ಟ, ರೋಗಗ್ರಸ್ತವಾಗುವ ಸೋಂಕುಗಳು ಪತ್ತೆಯಾಗುತ್ತವೆ. ತೀವ್ರತರ ಪ್ರಕರಣಗಳಲ್ಲಿ ಜನರು ಕೋಮಾಗೂ ಜಾರಲಿದ್ದಾರೆಂದು ಮಾಹಿತಿ ನೀಡಿದ್ದಾರೆ.



ಕಲುಷಿತ ಈಜುಕೊಳಗಳಲ್ಲಿ ಈಜುವುದನ್ನು ತಪ್ಪಿಸಿ. ಈಜುಕೊಳಕ್ಕೆ ಇಳಿಯುವವರು ಮೂಗಿನ ಕ್ಲಿಪ್‌ಗಳನ್ನು ಬಳಸುವುದರಿಂದ ಅಮೀಬಾ ಮೂಗಿನ ಮಾರ್ಗಗಳ ಮೂಲಕ ಪ್ರವೇಶಿಸುವುದನ್ನು ತಡೆಯಬಹುದು. ರೋಗನಿರೋಧಕ ಶಕ್ತಿ ಕಡಿಮೆ ಇರುವ ವ್ಯಕ್ತಿಗಳು ಕೆರೆಗಳಿಗೆ ಇಳಿಯುವುದು, ಈಜುಕೊಳಗಳಿಗೆ ಇಳಿಯುವುದನ್ನು ನಿಯಂತ್ರಿಸಿ ಎಂದು ಹೇಳಿದ್ದಾರೆ.

ಟ್ರೈಲೈಫ್ ಆಸ್ಪತ್ರೆಯ ಸಲಹೆಗಾರ ನರವಿಜ್ಞಾನಿ ಡಾ. ಆಂಟೊ ಇಗ್ನಾಟ್ ಅವರು ಮಾತನಾಡಿ, ಅಮೀಬಿಕ್ ಮೆನಿಂಗೊಎನ್ಸೆಫಾಲಿಟಿಸ್ ಅಪರೂಪ ಹಾಗೂ ಮಾರಕ ಕಾಯಿಲೆಯಾಗಿದ್ದು, ಸೋಂಕಿನಿಂದ ರಕ್ಷಿಸಿಕೊಳ್ಳಲು ಬೆಚ್ಚಗಿನ ನೀರಿನ ಚಟುವಟಿಕೆಗಳನ್ನು ನಿರ್ಬಂಧಿಸಿ. ಈಜುಕೊಳಕ್ಕೆ ಇಳಿಯುವ ಮೊದಲು ಈಜುಕೊಳದ ನಿರ್ವಹಣೆ ಮತ್ತು ಕ್ಲೋರಿನೀಕರಣವನ್ನು ಖಚಿತಪಡಿಸಿಕೊಳ್ಳಿ ಎಂದು ತಿಳಿಸಿದ್ದಾರೆ. ಸೋಂಕು ವರದಿಯಾಗಿರುವ ಪ್ರದೇಶಗಳಿಗೆ ಪ್ರಯಾಣಿಸಿದ್ದರೆ, ಒಂದು ವೇಳೆ ತಲೆನೋವು, ಜ್ವರ, ವಾಕರಿಕೆ, ವಾಂತಿ ಅಥವಾ ರೋಗಗ್ರಸ್ತವಾಗುವಿಕೆಗಳಂತಹ ಲಕ್ಷಣಗಳನ್ನು ಅನುಭವಿಸಿದರೆ, ತಕ್ಷಣ ವೈದ್ಯಕೀಯ ಚಿಕಿತ್ಸೆ ಪಡೆಯಿರಿ ಎಂದು ಸಲಹೆ ನೀಡಿದ್ದಾರೆ. ಕೇರಳದಲ್ಲ ಹಲವು ವರ್ಷಗಳಿಂದ ಅಮೀಬಿಕ್ ಮೆನಿಂಗೊಎನ್ಸೆಫಾಲಿಟಿಸ್ ಪ್ರಕರಣಗಳು ವರದಿಯಾಗುತ್ತಿವೆ. ಆದರೆ, ಸಾವಿನ ಸಂಖ್ಯೆ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ ಎಂದು ಆರೋಗ್ಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

# ಜಾತಿಗಣತಿ : ಇನ್ನೂ ಆಳವಾದ ಚಿಂತನೆ ಅಗತ್ಯ

## ಯಕ್ಕನಹಳ್ಳಿಯಲ್ಲಿ ನಡೆದ ಭಕ್ತಿ ಸಮರ್ಪಣಾ ಕಾರ್ಯಕ್ರಮದಲ್ಲಿ ಸಿರಿಗೆರೆ ಜಗದ್ಗುರುಗಳು



**ಹೊನ್ನಾಳಿ :** ಮಾಜಿ ಕಾನೂನು ಸಚಿವ ಮಾಧುಸ್ವಾಮಿ ಅವರು ಜಾತಿಗಣತಿಯಲ್ಲಿ ಏನು ಬರೆಸಬೇಕು ಗೊತ್ತಾಗುತ್ತಿಲ್ಲ. ನಿಮಗೆ ಏನಾದರೂ ಗೊತ್ತಾಗಿದ್ದ–ರೆ ತಿಳಿಸಿ ಎಂದು ತಮ್ಮನ್ನ ಪ್ರಶ್ನಿಸುವುದನ್ನು ಗಮನಿಸಿದರೆ ಸರ್ಕಾರ ನಡೆಸುತ್ತಿರುವ ಸಾಮಾಜಿಕ ಶೈಕ್ಷಣಿಕ ಆರ್ಥಿಕ ಸ್ಥಿತಿಗತಿಗಳ ಒಳಗೊಂಡ ಜಾತಿಗಣತಿಯ ಸಮೀಕ್ಷೆಯಲ್ಲಿ ಇನ್ನು ಆಳವಾದ ಚಿಂತನೆ ನಡೆಯಬೇಕಿದೆ ಎಂದು ಸಿರಿಗೆರೆ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಜಿ ಸಲಹೆ ನೀಡಿದರು.

ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದಲ್ಲಿ ನಡೆದ ಭಕ್ತಿ ಸಮರ್ಪಣಾ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಅರಕೆರೆ ಹನುಮಂತಪ್ಪ, ಅರಬಗಟ್ಟೆ ರಮೇಶ್ ಇವರು ಜಾತಿ ಸಮೀಕ್ಷೆಯಲ್ಲಿ ಏನು ಬರೆಸಬೇಕೆಂದು ಶ್ರೀಗಳಿಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಈ ವಿಷಯವಾಗಿ ತಮ್ಮ ಅಭಿಪ್ರಾಯ ಹಂಚಿಕೊಂಡರು.

ರಾಜ್ಯದಲ್ಲಿರುವ 6 ಕೋಟಿ ಜನತೆ ಜಾತಿ ಸಮೀಕ್ಷೆ ಪ್ರಕಟಗೊಂಡ 7 ದಿನಗಳ ಒಳಗಾಗಿ ಸಮೀಕ್ಷೆಯಲ್ಲಿ ಏನು ದೋಷವಿದೆ ಎಂದು ತಕರಾರು ಅರ್ಜಿ ಸಲ್ಲಿಸಬೇಕು ಎಂಬುದು ಹೇಗೆ ಸಾಧ್ಯ. ಸಮೀಕ್ಷೆಗೆ ಅಧ್ಯಕ್ಷರಾರು ಎಂಬುದು ಸ್ಪಷ್ಟವಾಗಬೇಕಿದೆ ಎಂದರು.

ಲಿಂಗಾಯತರು 'ಲಿಂಗಾಯಿತ' ಎಂದು 792 ಕಾಲಂನಲ್ಲಿ ಬರೆಸಬೇಕು. ವೀರಶೈವ ಲಿಂಗಾಯತ ಎಂದು 1986 ಕಾಲಂನಲ್ಲಿ ಬರೆಸ ಬೇಕು. ಈ ವಿಷಯವಾಗಿ ಚರ್ಚೆಗಳು ನಡೆ ಯುತ್ತಿರುವುದು ತಿಳಿದ ವಿಷಯವೇ ಆಗಿದೆ.

1010 ಪಂಚಮಸಾಲಿ 1317 ವೀರಶೈವ ಪಂಚಮಸಾಲಿ ಎಂದಿದೆ. ಎರಡಕ್ಕೂ ಏನು ವ್ಯತ್ಯಾಸ ಎಂಬುದರ ಬಗ್ಗೆ ಪಂಚಮಸಾಲಿ ಸ್ವಾಮೀಜಿಗಳೊಂದಿಗೆ ಚರ್ಚಿಸುವೆ ಎಂದು ಹೇಳಿದರು.

ಕೆಲವರು ಮೀಸಲಾತಿಗಾಗಿ ತುದಿಗಾಲಲ್ಲಿ ನಿಂತಿದ್ದು, ಮುಂದಿನ ಹಾಗು ಹೋಗುಗಳ ಬಗ್ಗೆ ಚಿಂತಿಸುವಂತೆ ಆಗದಿರಲಿ ಎಂದು ಸಲಹೆ ನೀಡಿ, ಇಂತಹ ಅನೇಕ ಸಮಸ್ಯೆಗಳಿಗೆ ಯಾರು ವಿವರಣೆ ನೀಡುವರು ಇದು ಹೇಗೆ ಸಾಧ್ಯವಿದೆ. ಕಂಪ್ಯೂಟರ್ ಆಪರೇಟರ್ ನಿಂದ ಲೋಪವಾಗಿದ್ದರೆ ಅದನ್ನ ಗಮನಿಸದೇ ಜವಾಬ್ದಾರಿ ಇರುವವರು ಸಹಿ ಹಾಕಿ ಒಪ್ಪಿದ್ದರೆ ಹೇಗೆ ಇಂತಹ ಅನೇಕ ಗೊಂದಲಗಳಿವೆ.

ಬಸವ ತತ್ವಕ್ಕೆ ವಿರುದ್ಧವಿದ್ದವರು ಇದೀಗ ಶೆಡ್ಡು ಹೊಡೆದು ಒಂದು ಜಾತಿ ಆಗುತ್ತಿದ್ದಾರೆ. ಜಾತಿಯ ಕಿಚ್ಚು ಹಚ್ಚುವ ಕೆಲಸವಾಗದಿರಲಿ. ಜಾತಿಗಣತಿಗೆ ದೊಡ್ಡ ಮಟ್ಟದಲ್ಲಿ 400 ಕೋಟಿ ರೂ.ಖರ್ಚಾಗುತ್ತಿದ್ದು, ಬದಲಿಗೆ ಒಂದು ದೊಡ್ಡ ಯೋಜನೆ ಮಾಡಿದ್ದರೆ ಒಳಿತಾ ಗುತ್ತಿತ್ತೇನೊ ಎಂದು ಅಭಿಪ್ರಾಯಪಟ್ಟರು.

ಚನ್ನಪ್ಪ ರೆಡ್ಡಿ ವರದಿ ಓದಿದ್ದೇವೆ ಗೊತ್ತಿದೆ. ಈ ರೀತಿಯ ಆರ್ಥಿಕ ಸಮೀಕ್ಷೆ ಆಗಲಿ. ಏಕೆಂದರೆ ಲಿಂಗಾಯಿತ ಎಂದ ಮಾತ್ರಕ್ಕೆ ಎಲ್ಲರೂ ಮುಂದುವರಿದಿದ್ದಾರೆ – ಉಳ್ಳವರು ಎಂಬುದು ತಪ್ಪು ಇದನ್ನೆ ಈ ವರದಿ ತಿಳಿಸಿದೆ. ನಿಮ್ಮ ಸ್ಥಾನಮಾನ ಉಳಿಸಿಕೊಳ್ಳಲು ಹೋಗಬೇಡಿ. ಈಗಾಗಲೇ ಕ್ಯಾಬಿನೆಟ್‌ಗೆ ಸಂಬಂಧಿಸಿದ ಮಂತ್ರಿಗಳೊಂದಿಗೆ ಮಾತನಾಡಿದ್ದೇವೆ ಎಂದರು.

ಇದೇ 16ರ ಕ್ಯಾಬಿನೆಟ್ ಮೀಟಿಂಗ್ ನಲ್ಲಿ ಜಾತಿಗಣತಿ ದೋಷವಿದ್ದಲ್ಲಿ ತಪ್ಪುಗಳ ವಿರೋಧಿಸುವಂತೆ ಮಂತ್ರಿಗಳಲ್ಲಿ ಅಭಿಪ್ರಾಯ ಹಂಚಿಕೊಳ್ಳಲಿ ಎಂಬುದಾಗಿ ತಿಳಿಸಿದರು.

1946ರ ಪೂರ್ವದಲ್ಲಿಯೇ ಸಿರಿಗೆರೆ ಹಿರಿಯ ಗುರುಗಳು ಸಹಪಂಕ್ತಿ ಭೋಜನ ಮಾಡಿಸಿದ್ದರು. ಬಸವಣ್ಣನ ತತ್ವ ಪಾಲಿಸುತ್ತೆ ಹೊರತು ಸರ್ಕಾರದ ತತ್ವವನ್ನಲ್ಲ. ನಾವು ಸತ್ಯದ ಪಕ್ಷಪಾತಿಗಳೆಂದರು. ಸಮೀಕ್ಷೆಯಲ್ಲಿ ಏನು ಬರಸಬೇಕೆಂಬ ನಿರ್ಧಾರ–ಕ್ಕೆ ಬಂದಿಲ್ಲ. ಇದೀಗ ನಮ್ಮನ್ನು ಕೇಳಬೇಡಿ ಎಂದು ಪ್ರಶ್ನಿಸಿದವರಿಗೆ ಅಭಿಪ್ರಾಯ ಹಂಚಿಕೊಂಡರು. ಜಾತಿಗಣತಿಯ ಆಯೋಗವು ಮಾಡಲು ಎಷ್ಟು ಜಾತಿಗಳಿವೆ ಎಂಬ ಸ್ಪಷ್ಟ ನಿರ್ದೇಶನವಿಲ್ಲದೆ ಜಾತ್ಯತೀತ ದೇಶದಲ್ಲಿ ಜಾತಿ ಸಮೀಕ್ಷೆ ಮಾಡಲು ಹೊರಟಿದೆ. ಜಾತಿಗಣತಿಯಲ್ಲಿನ ಲೋಪ ದೋಷ ನಿವಾರಿಸಿ ಸರಿಯಾಗಿ ಮಾಡಲಿ ಜಾತಿಗಳ ಸತ್ಯ ಸಂಗತಿ ಅನಾವರಣಗೊಳ್ಳಲಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಡಿ.ಜಿ. ಶಾಂತನಗೌಡ್ರು ಸೇರಿದಂತೆ ಅವಳಿ ತಾಲೂಕಿನ ಸಮಾಜದ ಅಧ್ಯಕ್ಷರು, ಸಮಾಜದ ಬಂಧುಗಳು, ಯಕ್ಕನಹಳ್ಳಿ ಗ್ರಾಮದ ಸಾರ್ವಜನಿಕರು ಉಪಸ್ಥಿತರಿದ್ದರು.

# ಮಂಗಳೂರು: ಸಾಮರಸ್ಯ ಉತ್ತೇಜಿಸಲು 'ಮಸೀದಿ ದರ್ಶನ'; ಎಲ್ಲರಿಗೂ ಮುಕ್ತ ಪ್ರವೇಶ



**ಮಂಗಳೂರು:** ಸದಾ ಕೋಮು ಗಲಭೆಗಳಿಂದ ಸುದ್ದಿಯಾಗುವ ದಕ್ಷಿಣ ಕನ್ನಡ ಜಿಲ್ಲೆಯ ಕುದ್ರೋಳಿ ಜಾಮಿಯಾ ಮಸೀದಿಯು ಸರ್ವಧರ್ಮ ಸಾಮರಸ್ಯವನ್ನು ಉತ್ತೇಜಿಸುವ ಮತ್ತು ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಭಾನುವಾರ ವಿಭಿನ್ನ ಕಾರ್ಯಕ್ರಮವೊಂದನ್ನು ನಡೆಸುವ ಮೂಲಕ ಗಮನ ಸೆಳೆಯಿತು.

ನಿನ್ನೆ ಕುದ್ರೋಳಿ ಜಾಮಿಯಾ ಮಸೀದಿಯಲ್ಲಿ ನಡೆದ "ಸಾರ್ವಜನಿಕ ಮಸೀದಿ ದರ್ಶನ" ಕಾರ್ಯಕ್ರಮವು ಸರ್ವಧರ್ಮೀಯರನ್ನು ಒಟ್ಟುಗೂಡಿಸಿ ಗಮನ ಸೆಳೆಯಿತು.

ಕುದ್ರೋಳಿ ಮಸೀದಿ ನಿರ್ವಹಣಾ ಸಮಿತಿಯು ಮುಸ್ಲಿಂ ಐಖ್ಯಾತ ವೇದಿಕೆ(ಒಂಗಿ), ಕುದ್ರೋಳಿ ಮತ್ತು ಜಮಾತೆ–ಇ–ಇಸ್ಲಾಮಿ ಹಿಂದ್(ಎಖಉ) ಸಹಯೋಗದೊಂದಿಗೆ ಮಂಗಳೂರಿನಲ್ಲಿ ಈ ವಿಶೇಷ ಕಾರ್ಯಕ್ರಮನ್ನು ಆಯೋಜಿಸಿತ್ತು. ವಿವಿಧ ಧಾರ್ಮಿಕ ಹಿನ್ನೆಲೆಯ ಮುಖಂಡರು, ಸಂದರ್ಶಕರು ಮಸೀದಿಗೆ ಭೇಟಿ ನೀಡಿದರು.

2013 ರಲ್ಲಿ ನವೀಕರಿಸಲಾದ ಶತಮಾನಗಳಷ್ಟು ಹಳೆಯದಾದ ಈ ಮಸೀದಿಗೆ ವೈವಿಧ್ಯಮಯ ಧಾರ್ಮಿಕ ಹಿನ್ನೆಲೆಯ ಪ್ರವಾಸಿಗರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಮಸೀದಿಗೆ ಬಂದ ಸರ್ವ ಧರ್ಮೀಯರನ್ನು ಖರ್ಜೂರ, ಕಲ್ಲಂಗಡಿ ರಸ, ತಿಂಡಿಗಳು, ಚಹಾ, ಊಟ, ಇಸ್ಲಾಮಿಕ್ ಸಾಹಿತ್ಯ ಮತ್ತು ಸುಗಂಧ ದ್ರವ್ಯ ಉಡುಗೊರೆಗಳನ್ನು ಒಳಗೊಂಡ ಆತಿಥ್ಯದೊಂದಿಗೆ ಸ್ವಾಗತಿಸಲಾಯಿತು.

ಹಾಜರಿದ್ದವರಿಗೆ ಮಸೀದಿಯ ಆವರಣವನ್ನು, ಅದರ ಪ್ರಾರ್ಥನಾ ಪ್ರದೇಶಗಳು, ಮೇಲಿನ ಮಹಡಿಗಳು ಮತ್ತು ಪರಂಪರೆಯ ವಿಭಾಗಗಳನ್ನು ಮುಕ್ತವಾಗಿ ಅನ್ವೇಷಿಸಲು ಅವಕಾಶ ನೀಡಲಾಯಿತು. ಫೋಟೋಗಳನ್ನು ಸೆರೆಹಿಡಿಯುವುದು ಮತ್ತು ಚಿಂತನಶೀಲ ಚರ್ಚೆಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶ ಕಲ್ಪಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕುರಾನ್ ಸಂದೇಶಗಳು, ಪ್ರವಾದಿಯ ಬೋಧನೆಗಳು, ವಿವಿಧ ಭಾಷೆಗಳಲ್ಲಿ ಕುರಾನ್‌ನ ಅನುವಾದಗಳು ಮತ್ತು ಮಸೀದಿಯ ಇತಿಹಾಸ ಹಾಗೂ ವಾಸ್ತುಶಿಲ್ಪವನ್ನು ಎತ್ತಿ ತೋರಿಸುವ ವಿಡಿಯೋ ಪ್ರಸ್ತುತಿ ಮಾಡಲಾಯಿತು. ಸ್ವಯಂಸೇವಕರು ಮತ್ತು ಧಾರ್ಮಿಕ ವಿದ್ವಾಂಸರು ನಮಾಜ್(ಪ್ರಾರ್ಥನೆ), ಅಜಾನ್(ಪ್ರಾರ್ಥನೆಗೆ ಕರೆ), ಮಸೀದಿ ಶಿಷ್ಟಾಚಾರ ಮತ್ತು ವಿವಿಧ ಜಮಾಅತ್‌ಗಳ(ಸಭೆಗಳು) ಪಾತ್ರಗಳ ಕುರಿತು ಪ್ರಶ್ನೆಗಳಿಗೆ ಉತ್ತರಿಸಿದರು.

ಮುಕ್ತತೆ, ಶಿಕ್ಷಣ ಮತ್ತು ಪರಸ್ಪರ ಗೌರವದ ಮೂಲಕ ಸಮುದಾಯಗಳ ನಡುವೆ ಸೇತುವೆಗಳನ್ನು ನಿರ್ಮಿಸುವತ್ತ ಒಂದು ಪ್ರಬಲ ಹೆಜ್ಜೆಯಾಗಿ ಈ ಕಾರ್ಯಕ್ರಮ ನೆರವೇರಿದೆ ಎಂದು ಸಂದರ್ಶಕರು ಅಭಿಪ್ರಾಯಪಟ್ಟರು.

# ಶಿಕ್ಷಕರ ನೇಮಕಾತಿ ನಿಶ್ಚಿತ : ಮಧು ಬಂಗಾರಪ್ಪ



**ರಾಣೇಬೆನ್ನೂರು:** ಚುನಾವಣೆ ಸಂದರ್ಭದಲ್ಲಿ ನಾವು ಹೇಳಿದ್ದೇವೆ. ಹೆಚ್ಚುವರಿ ಶಿಕ್ಷಕರಿರಬಹುದು ಅಥವಾ ಮತ್ತಿನ್ನೇನು ನೆಪ ಹೇಳದೆ ಶಿಕ್ಷಕರ ನೇಮಕಾತಿ ಮಾಡಿಯೇ ಮಾಡುತ್ತೇವೆ. ಇದು ನಿಶ್ಚಿತ. ಮುಖ್ಯ ಮಂತ್ರಿಗಳು ಹಾಗೂ ಸರ್ಕಾರ ಬದ್ಧವಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ದೃಡ ನಿಲುವು ಪ್ರಕಟಿಸಿದರು.

ಸಚಿವರು ರಾಣೇಬೆನ್ನೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರ ಮತ್ತು ಮಕ್ಕಳ ಅನುಪಾತ, ಹಳೆ ಪಿಂಚಣಿ ಯೋಜನೆ, ಕಾಲ್ಪನಿಕ ವೇತನ, ಜ್ಯೋತಿ ಸಂಜೀವಿನಿ, ಮಕ್ಕಳಿಗೆ ಸಮವಸ್ತ್ರ, ಶೂ, ಸಾಕ್ಸ್, ಹಬ್ಬದ ಮುಂಗಡ, ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಹಾಗೂ ಮಾನ್ಯತೆ ನವೀಕರಣ ಮುಂತಾದ ಎಲ್ಲ ಬೇಡಿಕೆಗಳ ಬಗ್ಗೆ ಮುಖ್ಯ ಮಂತ್ರಿಗಳು ಹಾಗೂ ಅಧಿಕಾರಿಗಳೊಡನೆ ಚರ್ಚಿಸಿ ಒಂದೆರಡು ದಿನಗಳಲ್ಲಿಯೇ ಸೂಕ್ತ ನಿರ್ಣಯ ಕೈಗೊಳ್ಳುವದಾಗಿ ಸಚಿವ ಮಧು ತಿಳಿಸಿದರು.

ಅಂದು ನಮ್ಮ ತಂದೆ ಬಂಗಾರಪ್ಪ ಅವರು ನೀಡಿದ ಪಂಪ್ ಸೆಟ್ ಯೋಜನೆಯಿಂದ ಶಿಕ್ಷಕರಾದ ಬಹಳಷ್ಟು ರೈತರ ಮಕ್ಕಳು ಇಲ್ಲಿದ್ದೀರಿ. ಜೊತೆಗೆ ಗೃಹ ಸಚಿವ ಪರಮೇಶ್ವರ ಅಧ್ಯಕ್ಷತೆಯ ಗ್ಯಾರಂಟಿ ಕಮೀಟಿಗೆ ನಾನು ಉಪಾಧ್ಯಕ್ಷನಾಗಿದ್ದೆ. ಸರ್ಕಾರ–ಕ್ಕೆ ಹಣಕಾಸಿನ ಒತ್ತಡ ಇದೆ. ಆದರೂ ಸಹ ಅಭಿವೃದ್ಧಿಯತ್ತ ನಮ್ಮ ಸರ್ಕಾರ ಹೆಜ್ಜೆ ಹಾಕುತ್ತಿದೆ. ಈ ಎಲ್ಲವುಗಳ ಜೊತೆಗೆ ಶಿಕ್ಷಕರ ಬೇಡಿಕೆ ಬಗ್ಗೆ ಒಂದೆರಡು ದಿನಗಳಲ್ಲಿಯೇ ನಿರ್ಣಯಿಸುತ್ತೇವೆ ಎಂದು ಮತ್ತೊಮ್ಮೆ ಭರವಸೆ ನೀಡಿದರು.

ನನ್ನ ಹೆಂಡತಿಯು ಶಿಕ್ಷಕಿಯಾಗಿದ್ದಾಳೆ. ನನ್ನವು ಶಿಕ್ಷಣ ಸಂಸ್ಥೆಗಳು ಇವೆ. ಇದರ ಪೂರ್ಣ ಅರಿವು ನನಗಿದೆ. ಅವರ ನೋವಿನ ಬಗ್ಗೆ ನನಗೆ ಮಾಹಿತಿ ಇದೆ.ಸರ್ಕಾರ ಶಿಕ್ಷಕರ ಬಗ್ಗೆ ತೀವ್ರಗಮನ ಹರಿಸಿ ಸೂಕ್ತ ನಿರ್ಣಯ ಕೈಗೊಳ್ಳಬೇಕು. ಈ ಬಗ್ಗೆ ಮುಖ್ಯ ಮಂತ್ರಿಗಳ ಮೇಲೆ ಒತ್ತಡ ತರಲು ನಾನು ಜೊತೆ ಬರುತ್ತೇನೆ ಎಂದು ಉಪಸಭಾಪತಿ ರುದ್ರಪ್ಪ ಲಮಾಣಿ ಅವರು ಸಚಿವರಿಗೆ ತಿಳಿಸಿದರು. ಜಿಲ್ಲೆಗೊಬ್ಬರು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ರಾಜ್ಯ ಪ್ರಶಸ್ತಿ ವಿತರಿಸಿದರು.

ವೇದಿಕೆಯಲ್ಲಿ ಸಂಘದ ರಾಜ್ಯ ಹಾಗೂ ಜಿಲ್ಲೆಯ ಪದಾಧಿಕಾರಿಗಳಾದ ಕೆ. ಹನುಮಂತಪ್ಪ, ಚಿತ್ರ ಕಲಾ ನಾಗರಾಜ, ಫಾಲನೇತ್ರ, ರವಿಕುಮಾರ, ನಾಗರಾಜ ನಲವಾಗಲ, ಎಂ. ಮಾಲತೇಶ, ಸಿ. ಮುತ್ತಯ್ಯ, ಎಂ.ಕೆ. ರಾಜು, ಆರ್. ನಾಗರತ್ನಾ, ರಾಜಗೋಪಾಲ, ಬಿ. ಅಜಯ್ ಮತ್ತಿತರರಿದ್ದರು.

# ಉಪ್ಪಾರರು ಹಿಂದುಳಿದಿರುವುದೇಕೆ ಎಂಬ ಆತ್ಮಾವಲೋಕ ಅಗತ್ಯ

## ಶಿವಮೊಗ್ಗ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಡಾ. ಪಿ. ರಂಗನಾಥ

**ಶಿವಮೊಗ್ಗ, ಸೆ.15 :** ಸಣ್ಣ ಸಣ್ಣ ಸಮುದಾಯಗಳಿಗೆ ಸಂಘಟನೆಯೇ ಬಲ. ಆದ್ದರಿಂದ ಸಮಾಜದವರೆಲ್ಲ ಸೇರಿ ಸಂಘಟನೆಯನ್ನು ಬಲಗೊಳಿಸಬೇಕು. ನಾವೇಕೆ ಹಿಂದುಳಿದಿದ್ದೇವೆ ಎನ್ನುವುದನ್ನು ಅರಿತುಕೊಂಡು ನಾವು ಏಕೆ ಬದಲಾಗುತ್ತಿಲ್ಲ ಎಂಬ ಬಗ್ಗೆ ಆತ್ಮಅವಲೋಕನ ಮಾಡಿಕೊಳ್ಳಬೇಕೆಂದು ಶಿವಮೊಗ್ಗ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಡಾ. ಪಿ. ರಂಗನಾಥ ಹೇಳಿದರು.



ಟ್ರಸ್ಟ್ ಪತ್ರಿಕಾ ಭವನದಲ್ಲಿ ಭಾನುವಾರ ಶ್ರೀ ಭಗೀರಥ ಸಹಕಾರ ಸಂಘದ 3ನೇಯ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಪ್ರತಿಭಾ ಪುರಸ್ಕಾರ ಮತ್ತು ನಿವೃತ್ತ ನೌಕರರನ್ನು ಗೌರವಿಸಿ ಮಾತನಾಡಿದ ಅವರು

ಶಿವಮೊಗ್ಗ ಜಿಲ್ಲೆ ಎಲ್ಲ ರಂಗದಲ್ಲೂ ಮುಂದುವರೆದಿದೆ. ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಸದೃಢವಾಗಿದ್ದಾರೆ. ಇಲ್ಲಿ ನಮ್ಮದೇ ಸಮಾಜದ ಜಿಲ್ಲಾಮಟ್ಟದ ಸಹಕಾರ ಸಂಘ ಸ್ಥಾಪಿಸಿ ಸಮಾಜದ ಏಳಿಗೆಗೆ ಅದು ಕಂಕಣಬದ್ಧವಾಗಿದೆ.

ಜಿಲ್ಲೆಯಲ್ಲಿನ ಪ್ರತಿಯೊಬ್ಬ ಸಮಾಜ ಬಾಂಧವರು ಸ್ವಯಂ ಪ್ರೇರಣೆಯಿಂದ ಮುಂದೆ ಬಂದು ಸಹಕಾರ ಸಂಘದ ಷೇರನ್ನು ಪಡೆದು ಸಮಾಜದ ಏಳಿಗೆಗೆ ಕೈಜೋಡಿಸಬೇಕು ಎಂದರು.

ಸಂಘದಿಂದ ಸಾಲ ಪಡೆದು ವಿವಿಧ ಚಟುವಟಿಕೆಗಳಲ್ಲಿ ಅದನ್ನು ತೊಡಗಿಸಿ ಉನ್ನತಿಯಾಗಬೇಕು. ಮತ್ತು ಕಾಲಕಾಲಕ್ಕೆ ಮರು ಪಾವತಿ ಮಾಡಬೇಕು. ಆ ಮೂಲಕ ಸಮಾಜಕ್ಕೆ ನಮ್ಮ ಋಣ ತೀರಿಸಬೇಕು. ನಾವು ಸಮಾಜದಿಂದ ಏನನ್ನು ಪಡೆದಿದ್ದೇವೆಯೋ ಅದನ್ನು ಮರಳಿ ಸಮಾಜಕ್ಕೆ ಕೊಡಬೇಕು.ಇನ್ನೊಬ್ಬರು ಮೇಲೆ ಬರಲು ನಾವು ನೆರವಾಗಬೇಕು ಎಂದರು.

ಸಮಾಜದಲ್ಲಿನ ಭಿನ್ನಮತವನ್ನು ತೊಡೆದುಹಾಕಿ ಒಳಿತಿಗಾಗಿ ಎಲ್ಲರೂ ಮುನ್ನಡೆಯಬೇಕು. ಸಂಘದ ಅಭಿವೃದ್ಧಿಗೆ ಯಾರು ಹೆಚ್ಚು ಕಾರಣಕರ್ತರಾಗುತ್ತಾರೋ ಅಂತಹವರು ಅಧಿಕಾರ ವಹಿಸಿಕೊಂಡು ಎಲ್ಲರನ್ನೂ ಒಳಗೊಂಡು, ಯುವಕರನ್ನು ಸೇರಿಸಿಕೊಂಡು ಸಮಾಜಕ್ಕಾಗಿ ದುಡಿಯಬೇಕು ಎಂದು ಕರೆ ನೀಡಿದರು.

ಸಂಘದ ನಿರ್ದೇಶಕ ಎಂ ಜಿ ಕೆ ಹನುಮಂತಪ್ಪ ಮಾತನಾಡಿ, ಗ್ರಾಮಾಂತರ ಪ್ರದೇಶದಲ್ಲಿರುವವರು ಶಿಕ್ಷಣವಂತರಾಗಬೇಕು. ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸದ ಸೌಲಭ್ಯ ಕಲ್ಪಿಸಬೇಕು. ಮಕ್ಕಳು ಪ್ರತಿಭಾನ್ವಿತರಾಗಬೇಕು. ಅವರ ಮೂಲಕ ಸಮಾಜ ಸೇವೆ ಮಾಡಬೇಕು. ಇಂದು ವಿದ್ಯೆ ಕಲಿತರಷ್ಟೇ ಮುನ್ನಡೆಯಲು ಸಾಧ್ಯವಿದೆ ಎಂದರು.

ಈ ಸಂದರ್ಭದಲ್ಲಿ ನಿವೃತ್ತ ಅಧಿಕಾರಿಗಳನ್ನು ಮತ್ತು ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭ ಪುರಸ್ಕಾರ ನೀಡಿ ಗೌರವಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಎನ್. ಮಂಜುನಾಥ ಮಾತನಾಡಿ, ಸಮಾಜದ ಬಾಂಧವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಬೇಕು ಆ ಮೂಲಕ ಸಮಾಜದಲ್ಲಿನ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿ ಉದ್ಯೋಗ ಮತ್ತು ಆರ್ಥಿಕತೆಯಲ್ಲಿ ಉನ್ನತಿ ಪಡೆಯಲು ಸಾಧ್ಯ ಎಂದರಲ್ಲದೇ, ಜಿಲ್ಲೆಯಲ್ಲಿನ ಸಮಾಜ ಬಾಂಧವರು ಭಗೀರಥ ಸಹಕಾರ ಸಂಘದ ಷೇರುದಾರರಾಗುವ ಮೂಲಕ ಮಾದರಿ ಸಹಕಾರ ಸಂಘ ಎಂದು ಹೆಸರುಗಳಿಸಲು ಸಂಕಲ್ಪ ಮಾಡಬೇಕಾಗಿದೆ ಎಂದರು.

ಉಪಾಧ್ಯಕ್ಷ ವಸಂತ ಹೋಬಳಿದಾರ್, ನಿರ್ದೇಶಕರಾದ ಎಲ್. ಮಂಜುನಾಥ, ಎಚ್. ರವಿ,ಯು ಕೆ ವೆಂಕಟೇಶ್, ಯು ಕೆ ರಮೇಶ್, ಜಿ ಚಿದಾನಂದ, ಕೆ ಶ್ರೀನಿವಾಸ, ಎಸ್ ಪಿ ಸುಧಾಕರ,ವೈ ಬಿ ಲೋಕೇಶ್ ,ಎಲ್. ಚಂದ್ರಶೇಖರ್,ಅರ್ಚನಾ, ಕೆ. ಟಿ. ಶ್ರೀನಿವಾಸ ಮೊದಲಾದವರು ಉಪಸ್ಥಿತರಿದ್ದರು.

# ಪರಿಶಿಷ್ಟರ ಜಮೀನನ್ನು ಉಳಿಸಿಕೊಡಲು ಅಪರ ಜಿಲ್ಲಾಧಿಕಾರಿಗೆ ಮನವಿ



**ಚಿಕ್ಕಮಗಳೂರು:** ಪೂರ್ವಿಕರ ಕಾಲದಿಂದ ಉಳುಮೆ ಮಾಡಿಕೊಂಡ ಬಂದ ಜಮೀನನ್ನು ನ್ಯಾಯಯುತವಾಗಿ ಜನಾಂಗಕ್ಕೆ ಉಳಿಸಿಕೊಡಬೇಕು ಎಂದು ಕಡೂರು ತಾಲ್ಲೂಕಿನ ದೊಡ್ಡಘಟ್ಟ ಗ್ರಾಮಸ್ಥರು ಅಪರ ಜಿಲ್ಲಾಧಿಕಾರಿ ನಾರಾಯಣ ಕನಕರಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಈ ಕುರಿತು ಮಾತನಾಡಿದ ಎಸ್ಸಿ ಎಸ್ಟಿ ದೌರ್ಜನ್ಯ ನಿಯಂತ್ರಣ ಸಮಿತಿ ಸದಸ್ಯ ಹುಣಸೇಮಕ್ಕಿ ಲಕ್ಷ್ಮಣ್ ಕಡೂರಿನ ಬೀರೂರು ಹೋಬಳಿಯ ದೊಡ್ಡಘಟ್ಟ ಗ್ರಾಮದಲ್ಲಿ 5.06 ಎಕರೆ ಪ್ರದೇಶದಲ್ಲಿ ಪರಿಶಿಷ್ಟ ಜನಾಂಗದ ಕುಟುಂಬಸ್ಥರು ಏಳು ದಶಕಗಳಿಂದ ಉಳುಮೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ ಎಂದರು.

ಆದರೆ ಇತ್ತೀಚೆಗೆ ಇದೇ ಗ್ರಾಮದ ವಾಸಿಯೊಬ್ಬರು ಪರಿಶಿಷ್ಟರ ಮೇಲೆ ದಬ್ಬಾಳಿಕೆ ನಡೆಸಿ ಜಮೀನನ್ನು ಉಳುಮೆ ಮಾಡಲು ಬಿಡುತ್ತಿಲ್ಲ. ಅನಗತ್ಯವಾಗಿ ಕುಟುಂಬಗಳಿಗೆ ದೌರ್ಜನ್ಯ ಎಸಗುತ್ತಿದ್ದಾರೆ. ಅಲ್ಲದೇ ಹೆಣ್ಣುಮಕ್ಕಳ ಮೇಲೆ ಜಾತಿ ನಿಂದನೆ ಮಾಡಿ ಹೀನಾಯವಾಗಿ ನಿಂದಿಸಿರುತ್ತಾರೆ ಎಂದರು.

ಆದ್ದರಿಂದ ಜಿಲ್ಲಾಡಳಿತ ನ್ಯಾಯವಾಗಿ ಉಳುಮೆ ಮಾಡಿಕೊಂಡಿರುವ ಪರಿಶಿಷ್ಟರನ್ನು ರಕ್ಷಿಸಿ ಜಮೀನನ್ನು ಉಳಿಸಿಕೊಡಬೇಕು ಹಾಗೂ ತೊಂದರೆ ನೀಡುತ್ತಿರುವ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ರಂಗಪ್ಪ, ಮೂತಪ್ಪ, ಶರತ್, ರಮೇಶ್, ಕವಿತಾ, ಗೌರಮ್ಮ, ಗೀತಾ, ನವೀನ್ ಮತ್ತಿತರರಿದ್ದರು.

# ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹುಟ್ಟುಹಬ್ಬದ ಪ್ರಯುಕ್ತ ಶಾಲಾ ಮಕ್ಕಳಿಗೆ ಊಟದ ತಟ್ಟೆ ಮತ್ತು ಸರ್ಕಾರಿ ಬಾಲ ಮಂದಿರಕ್ಕೆ ಶುದ್ಧ ನೀರಿನ ಘಟಕ ವಿತರಣೆ

**ದಾವಣಗೆರೆ:** ನಗರದ ಶ್ರೀರಾಮನಗರ ಸರ್ಕಾರಿ ಶಾಲಾ ಆವರಣದ ಶ್ರೀ ಕುವೆಂಪು ರಂಗಮಂಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರವರ 58ನೇ ಹುಟ್ಟುಹಬ್ಬದ ಪ್ರಯುಕ್ತ 41 ಮತ್ತು 31ನೇ ವಾರ್ಡ್‌ನ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಪಾಲಿಕೆ ಸದಸ್ಯರಾದ ನಾಗರಾಜ್‌ರವರ ನೇತೃತ್ವದಲ್ಲಿ ಶಾಲಾ ಮಕ್ಕಳಿಗೆ ಉಚಿತ ಊಟದ ತಟ್ಟೆ ಮತ್ತು ಸರ್ಕಾರಿ ಬಾಲ ಮಂದಿರಕ್ಕೆ ಶುದ್ಧ ನೀರಿನ ಘಟಕವನ್ನು ನೀಡಲಾಯಿತು.

ದೂಡಾ ಅಧ್ಯಕ್ಷ ದಿನೇಶ್ ಕೆ. ಕಾರ್ಯಕ್ರಮ ಉದ್ಘಾಟಿಸಿದರು.

ಮಹಾನಗರ ಪಾಲಿಕೆ ಸದಸ್ಯರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಮಾಜಿ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಶೈಲಾ ನಾಗರಾಜ್, ಶಿರಮಗೊಂಡನಹಳ್ಳಿ ರುದ್ರೇಶ್, 31ನೇ ವಾರ್ಡ್ ಅಧ್ಯಕ್ಷ ಮಾರುತಿ, 41ನೇ ವಾರ್ಡ್ ಅಧ್ಯಕ್ಷ ಶಿವಣ್ಣ, 31ನೇ ವಾರ್ಡ್ ಮಹಿಳಾ ಅಧ್ಯಕ್ಷೆ ಸಂಗೀತ, 41ನೇ ವಾರ್ಡ್‌ನ ಮಹಿಳಾ ಅಧ್ಯಕ್ಷೆ ರೇಕಮ್ಮ, ಭರಮಣ್ಣ ಎಸ್‌ಡಿಎಂಸಿ ಅಧ್ಯಕ್ಷರು, ಹದಡಿ ವೆಂಕಟೇಶ್ 31ನೇ ವಾರ್ಡ್ ನ ಪ್ರಧಾನ ಕಾರ್ಯದರ್ಶಿ, ಶಿವಣ್ಣ ಕಾಂಗ್ರೆಸ್ ಮುಖಂಡರು, ಹೋಟೆಲ್ ರುದ್ರೇಶ್, ಭೀರೇಶ್ ನಾಯ್ಕ, ಯುವ ಮುಖಂಡರಾದ ಮಧುಸೂದನ್, ಅಣ್ಣಪ್ಪ, ಮಾರುತಿ, ರಘು, ಮನು, ರಮೇಶ್, ಮುತ್ತು, ಗಣೇಶ ಶಾಲಾ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು. ಶಾಲಾ ಶಿಕ್ಷಕ ಜೆ.ಶಿವಲಿಂಗಪ್ಪ ಸ್ವಾಗತಿಸಿದರು. ಎನ್.ಅಜ್ಜಯ್ಯ ಶಿಕ್ಷಕರು ಕಾರ್ಯಕ್ರಮ ನಿರೂಪಿಸಿದರು.



# ಜಾತಿಗಣತಿ ಹೆಸರಿನಲ್ಲಿ ಹಿಂದೂ ಧರ್ಮವನ್ನು ಒಡೆಯಲು ಯತ್ನ : ಬಿಜೆಪಿ ಖಂಡನೆ

**ಚಿಕ್ಕಮಗಳೂರು:** ಜಾತಿ ಜಾತಿ ಮಧ್ಯೆ ಕಂದಕ ಸೃಷ್ಟಿಸಿ ಹಿಂದೂ ಧರ್ಮವನ್ನು ಹಿಂಬಾಗಿಲಿನಿಂದ ನುಚ್ಚುನೂರು ಮಾಡಿ ರಾಜಕೀಯ ಮಾಡಲು ಮುಖ್ಯಮಂತ್ರಿಗಳು ಹೊರಟಿದ್ದಾರೆ ಎಂದು ಜಿಲ್ಲಾ ಬಿಜೆಪಿ ವಕ್ತಾರ ಸಿ.ಹೆಚ್ ಲೋಕೇಶ್ ಆರೋಪಿಸಿದರು.



ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಧರ್ಮ ಧರ್ಮಗಳ ನಡುವೆ ಕಲಹ ಸೃಷ್ಟಿಸಲು ಜಾತಿಗಣತಿ ಷಡ್ಯಂತ್ರ ನಡೆಸಲಾಗುತ್ತಿದೆ. ವಿವಿಧ ಸಂಘಟನೆಗಳು ಮತ್ತು ಜಾತಿಗಳು ಈ ಹಿಂದೆ ಕಾಂತರಾಜ್ ಆಯೋಗದ ಜಾತಿಗಣತಿಗೆ ವಿರೋಧ ವ್ಯಕ್ತವಾಗಿದ್ದನ್ನು ಪರಿಗಣಿಸಿ ಸಮೀಕ್ಷೆ ನಡೆಸಲಾಗಿದ್ದು, ಈಗ ಹಿಂದೂ ಧರ್ಮವನ್ನು ಒಡೆಯುವ ಉದ್ದೇಶದಿಂದ ನೂರಾರು ಕೋಟಿ ರೂಗಳನ್ನು ವ್ಯಯಿಸಿ ಜಾತಿ ಗಣತಿ ಹುನ್ನಾರ ನಡೆಸುತ್ತಿದ್ದಾರೆಂದು ದೂರಿದರು.

ಎಲ್ಲಾ ಜಾತಿಗಳು ಸೇರಿ ಹಿಂದೂ ಧರ್ಮವಾಗಿದೆ. ಜಾತಿಗಳನ್ನು ಒಡೆದು ಮತಾಂತರಕ್ಕೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸಮೀಕ್ಷೆಯಲ್ಲಿ ಹಿಂದೂಗಳು ಕ್ರಿಶ್ಚಿಯನ್ ಆಗಿದ್ದಾರೆ. ಮುಸಲ್ಮಾನರು ಕ್ರಿಶ್ಚಿಯನ್‌ಗಳಾಗಿ ಮತಾಂತರಗೊಂಡಿದ್ದವರು ತಮ್ಮ ಮೂಲ ಧರ್ಮಕ್ಕೆ ವಾಪಾಸ್ ಆಗಿರುವ ನಿದರ್ಶನಗಳು ಇವೆ ಎಂದು ಹೇಳಿದರು.

ಕ್ರಿಶ್ಚಿಯನ್‌ಗೆ ಮತಾಂತರಗೊಂಡಿರುವ ಸುಮಾರು 47 ಜಾತಿಗಳಲ್ಲಿ ಕಾಂಗ್ರೆಸ್ ದೇಶದಲ್ಲಿ ಶಾಂತಿ ಕದಡುವ, ಕಂದಕಗಳನ್ನು ಸೃಷ್ಟಿಸಿ ಗಲಭೆ ಮೂಲಕ ಶಾಂತಿಗೆ ಧಕ್ಕೆ ತರುವ ಯತ್ನಗಳು ನಡೆದಿವೆ ಎಂದು ವಿವರಿಸಿದರು.

ಯಾರು ಮತಾಂತರಗೊಂಡಿದ್ದಾರೆ ಅವರನ್ನು ಸ್ಪಷ್ಟವಾಗಿ ಕ್ರಿಶ್ಚಿಯನ್ ಎಂದು ಪರಿಗಣಿಸಬೇಕು. ಆದರೆ, ಹರಿಜನ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್ ಎಂಬಿತ್ಯಾದಿಗಳಾಗಿ ವಿಂಗಡಿಸಿ ಮೀಸಲಾತಿ ನೀಡುವ ಕಾಂಗ್ರೆಸ್ ಪಕ್ಷದ ಹುನ್ನಾರವನ್ನು ಖಂಡಿಸಿದರು.

ಜಿಲ್ಲೆಯಾದ್ಯಂತ ಈಗಾಗಲೇ ರಾಜ್ಯ ಹಿಂದುಳಿದ ಆಯೋಗದ ಹೆಸರಿನಲ್ಲಿ ಮನೆಯ ವಿದ್ಯುತ್ ಮೀಟರ್ ಸ್ಟಿಕ್ಕರ್ ಅಂಟಿಸಲಾಗಿದ್ದು, ಜನರ ತೆರಿಗೆ ಹಣವನ್ನು ರಾಜ್ಯಸರ್ಕಾರ ಜಾತಿಗಣತಿ ಹೆಸರಿನಲ್ಲಿ ಪೋಲುಮಾಡುತ್ತಿದೆ ಎಂದು ದೂರಿದರು.

ಜಿಲ್ಲಾ ವಕ್ತಾರ ಬಿಜಿ ಸೋಮಶೇಖರ್ ಮಾತನಾಡಿ, ಮಲೆನಾಡು ಭಾಗದಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿ ಬೆಳೆ ಹಾನಿ ಜೊತೆಗೆ ಜೀವ ಹಾನಿಯೂ ಆಗಿದೆ. ಆ ಭಾಗದ ರೈತರು, ಕಾರ್ಮಿಕರು ಜೀವಭಯದಲ್ಲಿ ಇದ್ದಾರೆ.

Published and Owned by : **PRATHIBHA M.S.,** Published at : No. 900/A2, Opp-Banashankri Temple Arch, Main Road, Shakti Nagara, Davanagere, Karnataka-577004. Printed by : **MALLIKARJUNAPPA H.G.** Printed at : SHIVA MEDIA HOUSE, No.900/A2, Opp-Banashankari Temple Arch, Main Road, Davanagere, Karnataka-577004. Editor: **MALLIKARJUNAPPA H.G.**